# 18 ಸಾವಿರ ಸ್ಟಾರ್ಟ್‌ಅಪ್‌ಗಳ ಪ್ರಾರಂಭಕ್ಕೆ ನೋಂದಣಿ

## ಕಲ್ಯಾಣ ಕರ್ನಾಟಕ ಉದ್ಯಮ ಬೆಳವಣಿಗೆಗೆ ಕೃಷಿಕಲ್ಪ ಸೆಂಟರ್‌ಆಫ್ ಎಕ್ಸಲೆನ್ಸ್ ಪೂರಕ: ಸಚಿವ ಪ್ರಿಯಾಂಕ್

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಕೃಷಿಕಲ್ಪಸೆಂಟರ್‌ಆಫ್ ಎಕ್ಸಲೆನ್ಸ್ ಕಲ್ಯಾಣ ಕರ್ನಾಟಕಭಾಗದಉದ್ಯಮಬೆಳವಣಿಗೆಗೆ ಪೂರಕವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗೋಲ್ಡ್ ಹಬ್‌ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟಿಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ ಕೃಷಿಕಲ್ಪ ಆಡಿಯಲ್ಲಿ ಆಯೋಜಿಸಲಾಗಿದ್ದ ಕೃಷಿಕಲ್ಪ ಸೆಂಟರ್‌ಆಫ್ ಎಕ್ಸಲೆನ್ಸ್ ಉದ್ಘಾಟನೆ ಹಾಗೂ ವಿಕಾಸ ಮತ್ತು ಪ್ರೇರಣಾ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿ 18,000 ನೂತನ ಸ್ಟಾರ್ಟ್‌ಅಪ್‌ಗಳು ಪ್ರಾರಂಭಗೊಳ್ಳಲು ನೋಂದಣಿ ಮಾಡಿಕೊಂಡಿವೆ, ನವೋದ್ಯಮಕ್ಕೆ ಗೈಡೆನ್ಸ್, ಪೈಲೆಟ್ ಹಾಗೂ ಫಂಡಿಂಗ್ ಬೇಕೇಬೇಕು. ಇದಕ್ಕೆ ರು.50 ಲಕ್ಷ ಅನುದಾನ ಅಗತ್ಯವಿದೆ. ಸದ್ಯ ರಾಜ್ಯ ಸರ್ಕಾರ ಒಟ್ಟು 1500 ಸ್ಟಾರ್ಟ್ ಅಪ್‌ಗಳಿಗೆ ಈ ಅನುದಾನ ನೀಡಲು ತಯಾರಾಗಿದೆ ಎಂದರು.



ಬೆಂಗಳೂರು ಆಚೆಗೂ ಕೂಡ ಉದ್ಯಮ ಸ್ಥಾಪನೆಗೆ ಸರ್ಕಾರ ಆದ್ಯತೆ ನೀಡುತ್ತಿದ್ದು 'ಬಿಯಾಂಡ್ ಬೆಂಗಳೂರು' ಕಾರ್ಯಕ್ರಮದಡಿ ಬೆಂಗಳೂರು ಹೊರತುಪಡಿಸಿ, ಮೈಸೂರು, ಮಂಗಳೂರು, ಹುಬ್ಬಳ್ಳಿ- ಧಾರವಾಡ, ಬೆಳಗಾವಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಹಾಗೂ ನವೋದ್ಯಮ ಸ್ಥಾಪನೆಗೆ ಮುಂದಾಗುವ ಸ್ಟಾರ್ಟ್ ಅಪ್‌ಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ ಎಂದ ಸಚಿವರು ಟೈರ್2 ಹಾಗೂ 3 ನಗರಗಳ ಬೆಳವಣಿಗೆಗೆ ಹಾಗೂ ಉದ್ಯಮ ಅಭಿವೃದ್ಧಿಗೆ ಬೇಕಾಗುವ ಎಲ್ಲ ಕ್ರಮವಹಿಸಲು ಮುಂದಾಗಿದೆ ಎಂದರು.

ನವೋದ್ಯಮದ ಅಭಿವೃದ್ಧಿಯನ್ನು ಪರಿಗಣಿಸಿ ಡೀಪ್ ಟೆಕ್ ಸ್ಟಾರ್ಟ್‌ಅಪ್ ಪ್ರೋತ್ಸಾಹಕ್ಕಾಗಿ ಅನುದಾನ ನೀಡಲು ತಯಾರಿದ್ದು, ಮೈಸೂರಿನಲ್ಲಿ 402, ಮಂಗಳೂರಿನಲ್ಲಿ 332, ಹುಬ್ಬಳ್ಳಿ- ಧಾರವಾಡ ಭಾಗದಲ್ಲಿ 463 ಹಾಗೂ ಕಕ ಭಾಗದಲ್ಲಿ 282 ಸ್ಟಾರ್ಟ್ ಅಪ್‌ಗಳಿದ್ದು, ಇವುಗಳಿಗೆ ರು.1,000 ಕೋಟಿ ಅನುದಾನವನ್ನು ನೀಡಿ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದು, ಇದರಿಂದ ಟೈರ್2 ಹಾಗೂ 3 ನಗರಗಳಲ್ಲಿ ಉದ್ಯಮಗಳ ಬೆಳವಣಿಗೆಗೆ ಸಹಕಾರಿ ಎಂದರು. ಕೆಕೆಆರ್‌ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ. ಅಜಯ್ ಸಿಂಗ್ ಮಾತನಾಡಿ, ಸರ್ಕಾರ, ಕೆಕೆಆರ್‌ಡಿಬಿ ಕ.ಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತವಾರಣ ನಿರ್ಮಾಣಕ್ಕೆ ಮುಂದಾಗಿದ್ದು, ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪದೊಂದಿಗೆ ಒಗ್ಗೂಡಿ ಕೃಷಿಕಲ್ಪ ಸೆಂಟರ್‌ಆಫ್ ಎಕ್ಸಲೆನ್ಸ್ ಕಾರ್ಯಕ್ರಮ ರೂಪಿಸಿದೆ ಎಂದರು. ಮುಂಬರುವ 1 ದಶಕದಲ್ಲಿ ಗೋವಿಂದ್ ರಾವ್ ವರದಿಯಂತೆ ಹೆಚ್ಚಿನ ಅನುದಾನ ಒದಗಿಸಲಾಗುವುದು ಎಂದರು.

ಎಂವೈ ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂಎಲ್‌ಸಿ ಜಗದೇವ ಗುತ್ತೇದಾರ, ಚಂದ್ರಿಕಾ ಪರಮೇಶ್ವರ, ಅರುಣ್ ಕುಮಾರ್‌ಎಂವೈ ಪಾಟೀಲ, ಪ್ರವೀಣ್ ಹರವಾಳ, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್, ಸಿಇಒ ಭಂವರ್ ಸಿಂಗ್ ಮೀನಾ, ಕಮಿಷನರ್‌ಡಾ ಶರಣಪ್ಪ ಢಗೆ, ಮಹಾನಗರ ಪಾಲಿಕೆ ಕಮಿಷನರ್‌ಅವಿನಾಶ ಶಿಂಧೆ, ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ, ಕೃಷಿಕಲ್ಪದ ಸಿಇಒ ಸಿಎಂ ಪಾಟೀಲ್ ಇದ್ದರು.

# ಸಿರಿಧಾನ್ಯಗಳ ಆಧುನಿಕ ಪೌಷ್ಟಿಕತೆಗೆ ಪ್ರಯತ್ನ

## ಜಿಲ್ಲಾಧಿಕಾರಿ ಇಕ್ರಂ ಶರೀಫ್ ಸಲಹೆ। ಸಿರಿಧಾನ್ಯ ಉತ್ಪನ್ನಗಳ ಬಿಡುಗಡೆ

**ಸಂ.ಕ. ಸಮಾಚಾರ ಕಲಬುರಗಿ:** ಗ್ರಾಹಕರಿಗೆ ಸುಲಭವಾಗಿ ಮತ್ತು ಅನುಕೂಲಕರವಾಗಿ ತಲುಪಿಸುವ ನಿಟ್ಟಿನಲ್ಲಿ ಮೂವರು ಯುವ ಉದ್ಯಮಿಗಳ ಸೇರಿ ತಯಾರಿಸಿರುವ ಪ್ರೋವಿಫೈ ಸಂಸ್ಥೆಯ ಸಕ್ರಿಯಗೊಳಿಸಿದ ಸಿರಿಧಾನ್ಯಗಳು ಪೌಷ್ಟಿಕಾಂಶದ ಉತ್ಪನ್ನಗಳಾಗಿವೆ ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

ನಗರದ ಗಾಜೀಪುರ ಪ್ರದೇಶದ ಕೃಷಿ ಕಲ್ಪ ಕಚೇರಿಯಲ್ಲಿ ಬುಧವಾರ ನಡೆದ ಸರಳ ಸಮಾರಂಭದಲ್ಲಿ ಪ್ರೋವಿಫೈ ಫುಡ್ಸ್ ಪ್ರೈ ಲಿ. ಸಂಸ್ಥೆಯಿಂದ ವೈಜ್ಞಾನಿಕವಾಗಿ ಸಂಸ್ಕರಿಸಿದ (ನವಣೆ), (ಊದಲು), (ಸಾಮೆ), (ಹಾರಕಾ) ಹಾಗೂ (ಕೊರಲೆ) ಸಿರಿಧಾನ್ಯಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಬದಲಾಗುತ್ತಿರುವ ಜೀವನಶೈಲಿ ಮತ್ತು ಆರೋಗ್ಯಕರ ಆಹಾರದ ಕುರಿತು ಹೆಚ್ಚುತ್ತಿರುವ ಅರಿವಿನ ಹಿನ್ನೆಲೆಯಲ್ಲಿ ಪೌಷ್ಟಿಕಾಂಶಭರಿತ ಸಾಂಪ್ರದಾಯಿಕ ಆಹಾರಗಳನ್ನು ಒದಗಿಸುವ ಉದ್ದೇಶ ಈ ಉತ್ಪನ್ನಗಳು ಹೊಂದಿದ್ದು, ಯುವ ಉದ್ಯಮಿಗಳ ಈ ಪಯಣ ಯಶಸ್ಸಿನಿಂದ ಕೂಡಲಿ ಎಂದು ಹಾರೈಸಿದರು.

ಬೆಂಗಳೂರುದಾಚೆ ಟೈರ್-2, ಟೈರ್-3 ಸಿಟಿಯಲ್ಲಿ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡುವುದು ಇದರ ಮೂಲ ಉದ್ದೇಶವಾಗಿದೆ. ಎಲಿವೇಟ್ ಕರ್ನಾಟಕದಲ್ಲಿ ಯುವ ಉದ್ಯಮಿಗಳಿಗೆ ಸ್ಟಾರ್ಟ್ ಅಪ್ ನಡಿ ಸರ್ಕಾರ ಸಹಾಯಧನ ನೀಡುತ್ತಿದ್ದು, ಯುವ ಉದ್ಯಮಿಗಳು ಇದರ ಲಾಭ ಪಡೆಯಬೇಕೆಂದರು. ಉತ್ಪನ್ನಗಳ ತಯಾರಿಕೆಗೆ ತರಬೇತಿ, ಮಾರುಕಟ್ಟೆ ಕೌಶಲ್ಯ ಕುರಿತು ಸಲಹೆ ನೀಡುವುದಲ್ಲದೆ ಇವರ ಹಿಂದೆ ಟೊಂಕ ಕಟ್ಟಿ ನಿಂತಿರುವ ಕೃಷಿ ಕಲ್ಪ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ ಎಂದು ಡಿ.ಸಿ. ಇಕ್ರಂ ಶರೀಫ್ ತಿಳಿಸಿದರು.




ಕಲಬುರಗಿಯಲ್ಲಿ ಬುಧವಾರ ನಡೆದ ಸರಳ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಸಿರಿಧಾನ್ಯಗಳನ್ನು ಬಿಡುಗಡೆ ಮಾಡಿದರು.

ಕೃಷಿಕಲ್ಪ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ. ಎಂ. ಪಾಟೀಲ್ ಮಾತನಾಡಿ, ಪ್ರತಿ ವರ್ಷ 100 ನವೋದ್ಯಮಿಗಳಿಗೆ ಗರಿಷ್ಠ 50 ಲಕ್ಷ ರೂ. ವರೆಗೆ ಪ್ರೋತ್ಸಾಹಧನ ನೀಡುತ್ತಿದೆ. ಪ್ರಸ್ತುತ 25 ಜನ ನವೋದ್ಯಮಿಗಳ ಪೈಕಿ 18 ಜನ ಕಲ್ಯಾಣ ಕರ್ನಾಟಕ ಭಾಗದವರೆ ಆಯ್ಕೆಯಾಗಿದ್ದಾರೆ. ಸ್ಟಾರ್ಟ್ ಅಪ್ ಮಾಡುವ ನವೋದ್ಯಮಿಗಳಿಗೆ ಮಾರುಕಟ್ಟೆಯಲ್ಲಿನ ಬೇಡಿಕೆ ಅನುಗುಣವಾಗಿ ಮಾರುಕಟ್ಟೆ ಕೌಶಲ್ಯ, ಉತ್ಪನ್ನಗಳ ತಯಾರಿಕೆ, ಸಂಸ್ಕರಣೆ, ಮೌಲ್ಯಯುತ ಉತ್ಪನ್ನ ಮಾಡುವ ನಿಟ್ಟಿನಲ್ಲಿ ಕೃಷಿ ಕಲ್ಪ ಸಂಸ್ಥೆ ಅವರಿಗೆ ಎಲ್ಲಾ ರೀತಿಯಿಂದ ನೆರವು ನೀಡುತ್ತಿದೆ ಎಂದರು.

**ಸಾಂಪ್ರದಾಯಿಕ ಸಿರಿಧಾನ್ಯಗಳಿಂದ ಆಧುನಿಕ ಪೌಷ್ಟಿಕತೆಯತ್ತ:**

ಪೌಷ್ಟಿಕಾಂಶಭರಿತ ಸಾಂಪ್ರದಾಯಿಕ ಸಿರಿಧಾನ್ಯಗಳನ್ನು ಇಂದಿನ ಗ್ರಾಹಕರಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಗುರಿ ಹೊಂದಲಾಗಿದೆ. ಸಿರಿಧಾನ್ಯಗಳ ನೈಸರ್ಗಿಕ ಗುಣಗಳನ್ನು ಕಾಪಾಡಲು ನಾವು ಬದ್ಧರಾಗಿದ್ದೇವೆ. ಈ ಉತ್ಪನ್ನ ಬಿಡುಗಡೆ ಕೇವಲ ಹೊಸ ಉತ್ಪನ್ನಗಳ ಪರಿಚಯವಲ್ಲ ಎಂದರು.

> ಪ್ರೊವಿಫೈ ಆಕ್ಟಿವೇಟೆಡ್ ಮಿಲೆಟ್ ಉತ್ಪನ್ನಗಳ ಶ್ರೇಣಿಯನ್ನು ಇಂದಿಲ್ಲಿ ಬಿಡುಗಡೆ ಮಾಡಲಾಗಿದೆ. ಭಾರತದಲ್ಲಿ ಆಹಾರದ ಕೊರತೆಯಿಲ್ಲ, ಆದರೆ ಸಾಕಷ್ಟು ಪೌಷ್ಟಿಕಾಂಶದ ಅಗತ್ಯವಿದೆ. ಅದನ್ನು ಪ್ರೊವಿಫೈ ಪೂರೈಸುತ್ತಿದೆ. ಪ್ರತಿ ಸ್ಟಾರ್ಟ್ ಅಪ್ ಕಂಪನಿಗಳಿಂದ ಕನಿಷ್ಠ 4 ಜನರಿಗೆ ಉದ್ಯೋಗ ಸೃಜನೆಯಾಗುತ್ತಿದೆ.
>
> ■ ಸಿ.ಎಂ. ಪಾಟೀಲ, ಸಿಇಓ ಕೃಷಿಕಲ್ಪ ಸಂಸ್ಥೆ

ನಮ್ಮ ಈ ಸಿರಿಧಾನ್ಯಗಳು 7-8 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಯಾಂತ್ರಿಕವಾಗಿ ಒಣಗಿಸಿ ಹೈಜೀನ್ ಪ್ಯಾಕ್ ನೊಂದಿಗೆ ಮಾರಾಟ ಮಾಡಲಾಗುತ್ತಿದೆ. ಇದರಿಂದ ಮೆಟ್ರೋದಂತಹ ನಗರಗಳಲ್ಲಿ ತ್ವರಿತವಾಗಿ ಅಡುಗೆ ಮಾಡಲು ಗ್ರಾಹಕರಿಗೆ ಸಹಾಯವಾಗಲಿದ್ದು, ಅವರಿಗೆ ಸಮಯ ಸಹ ಉಳಿಯಲಿದೆ. ವಿಶೇಷವಾಗಿ ಈ ಉತ್ಪನ್ನಗಳಿಂದ ಶೀಘ್ರ ಜೀರ್ಣ ಸಹ ಆಗುತ್ತೆ ಎನ್ನುತ್ತಾರೆ ನವೋದ್ಯಮಿಗಳಾದ ಪ್ರಶಾಂತ್ ಎಸ್. ಬೆಳ್ಳಿಮಠ್, ಮಹೇಶ ಪಾಟೀಲ್ ಹಾಗೂ ನಾಗರಾಜ ಮರಲಿಂಗಣ್ಣವರ ಅವರು.

ಕೃಷಿಕಲ್ಪ ಸಂಸ್ಥೆಯ ಉಪಾಧ್ಯಕ್ಷ ಈರಣ್ಣ ರೊಟ್ಟಿ, ಯುವ ಉದ್ಯಮ ಯೋಜನೆ ಹೆಡ್ ಅಭಿನಂದನ್ ಕವಳಿ, ಉದ್ಯಮಿ ದೊಡ್ಡಪ್ಪ ನಿಷ್ಠಿ, ಪ್ರೊಬೇಷನರ್ ಐ.ಎ.ಎಸ್. ಅಧಿಕಾರಿ ಶಿಬಿರ್ ಮೋಘಾ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್, ಕೃಷಿ ಕಲ್ಪ ಸಂಸ್ಥೆಯ ಇನ್ನಿತರರು ಇದ್ದರು.

# DC launches nutrient cereal products of Provifi Foods

**They have been prepared to 'activate' nutrition in traditional cereals for easy consumption**

KALABURAGI, DHNS




Deputy Commissioner Ikram Sharif and Krishikalpa Foundation CEO C M Patil release the five cereal products of Provifi Foods in Kalaburagi on Wednesday. DH PHOTO

Five cereal products of Provifi Foods, prepared to 'activate' the nutrition in traditional cereals for easy consumption by people in cities and towns, were launched in the market here on Wednesday. Deputy Commissioner Ikram Sharif and Krishikalpa Foundation CEO C M Patil released these products in a programme held here.

Speaking on the occasion, Ikram Sharif said that cereals were part of the diet of our elders. People are again showing interest in the consumption of cereals as a result of changing lifestyle and health concerns.

Three young entrepreneurs have established an innovative company, Provifi Foods, to meet this demand and have started selling value-added cereal products. The speciality of these products is that the abundant nutrients in cereals are scientifically processed to make them easier to digest, he added.

He said that the state government has implemented the Elevate Karnataka and LEAP programme to attract more investment in Kalyana Karnataka, including Kalaburagi. It is aimed to accelerate the local economic activities under the Beyond Bangaluru mission in Phase 2 and 3. Under the Elevate Karnataka scheme, the government is providing financial assistance and guidance to the start-ups and young entrepreneurs should take advantage of this, he advised.

Krishikalpa Foundation CEO C M Patil said that the foundation is providing all kinds of assistance to the start-ups in terms of marketing skills, production, processing of crops and increasing the value of the products according to the demand in the market. Since last 2017, the state government has been giving incentives of up to Rs 50 lakh to 100 start ups every year. At present, 18 out of 25 start-ups are from Kalyan Karnataka.

Provifi Foods co-founder Prashanth Bellerimath said that the full nutrition of traditional cereals can be provided to the body if these are soaked in water for seven to eight hours. Otherwise, cereals would become like other grains. "Given the changes in lifestyle, it is difficult for people to spend more time preparing cereals for consumption. Therefore, we have cleaned, systematically soaked, scientifically dried and packaged the cereals before introducing them to the market. This process enhances their taste and nutritional value," he informed.

Probationary IAS officer Shikhar Mogha, District Industrial Centre Joint Director Abdul Azim, Krishikalpa Vice-President Iranna Rotte, Provifi Innovation co-founders Mahesh Patil and Nagaraj Marlinganavar were present.

# ಗ್ರಾಹಕರಿಗೆ ಸಿಗಲಿದೆ ಸಕ್ರಿಯಗೊಳಿಸಿದ ಸಿರಿಧಾನ್ಯ

## ಕಲ್ಯಾಣ ಕರ್ನಾಟಕದಲ್ಲಿ ನವೋದ್ಯಮಕ್ಕೆ ಆಸರೆ ■ ಯುವೋದ್ಯಮಿಗಳು ಸಹಾಯಧನದ ಲಾಭ ಪಡೆಯಲಿ

■ ಉದಯವಾಣಿ ಸಮಾಚಾರ

**ಕಲಬುರಗಿ:** ಗ್ರಾಹಕರಿಗೆ ಸುಲಭವಾಗಿ ಮತ್ತು ಅನುಕೂಲಕರವಾಗಿ ತಲುಪಿಸುವ ನಿಟ್ಟಿನಲ್ಲಿ ಮೂವರು ಯುವ ಉದ್ಯಮಿಗಳು ಸೇರಿ ತಯಾರಿಸಿರುವ 'ಪ್ರೊವಿಫಿ' ಸಂಸ್ಥೆ ಸಕ್ರಿಯಗೊಳಿಸಿದ ಸಿರಿಧಾನ್ಯಗಳು ಪೌಷ್ಟಿಕಾಂಶದ ಉತ್ಪನ್ನಗಳಾಗಿವೆ ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

ಬುಧವಾರ ನಗರದ ಗಾಜೀಪುರ ಪ್ರದೇಶದ 'ಕೃಷಿ ಕಲ್ಪ' ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಪ್ರೊವಿಫಿ ಫುಡ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ವೈಜ್ಞಾನಿಕವಾಗಿ ತಯಾರಿಸಿರುವ ನವಣೆ, ಊದಲು), ಸಾಮೆ, ಹಾರಕಾ, ಕೊರಲೆ ಸಿರಿಧಾನ್ಯಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಬದಲಾಗುತ್ತಿರುವ ಜೀವನಶೈಲಿ ಮತ್ತು ಆರೋಗ್ಯಕರ ಆಹಾರದ ಕುರಿತು ಹೆಚ್ಚುತ್ತಿರುವ ಅರಿವಿನ ಹಿನ್ನೆಲೆಯಲ್ಲಿ ಪೌಷ್ಟಿಕಾಂಶಭರಿತ ಸಾಂಪ್ರದಾಯಿಕ ಆಹಾರಗಳನ್ನು ಒದಗಿಸುವ ಉದ್ದೇಶ ಈ ಉತ್ಪನ್ನಗಳು ಹೊಂದಿದ್ದು, ಯುವ ಉದ್ಯಮಿಗಳ ಈ ಪಯಣ ಯಶಸ್ಸಿನಿಂದ ಕೂಡಲಿ ಎಂದು ಹಾರೈಸಿದರು.

ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಹೂಡಿಕೆ, ಬಂಡವಾಳ ಹಾಕಲೆಂದ ರಾಜ್ಯ ಸರ್ಕಾರವು ಎಲಿವೇಟ್ ಕರ್ನಾಟಕ ಮತ್ತು ಲೀಪ್ ಯೋಜನೆ ಜಾರಿಗೊಳಿಸಿದೆ. ಬೆಂಗಳೂರಿನಾಚೆ ಟೈರ್-2, ಟೈರ್-3 ಸಿಟಿಯಲ್ಲಿ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡುವುದು ಇದರ ಮೂಲ ಉದ್ದೇಶವಾಗಿದೆ. ಎಲಿವೇಟ್ ಕರ್ನಾಟಕದಲ್ಲಿ ಯುವ ಉದ್ಯಮಿಗಳಿಗೆ ಸ್ಟಾರ್ಟ್ ಅಪ್ ನಡಿ ಸರ್ಕಾರ ಸಹಾಯಧನ ನೀಡುತ್ತಿದ್ದು, ಯುವ ಉದ್ಯಮಿಗಳು ಇದರ ಲಾಭ ಪಡೆಯಬೇಕೆಂದರು.



ಕಲ್ಬುರ್ಗಿಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಜಿಲ್ಲಾಧಿಕಾರಿ ಕ್ರಮ ಶರೀಫ್ ಅವರು ಸಿರಿಧಾನ್ಯಗಳ ಸಾಂಪ್ರದಾಯಿಕ ವಿವಿಧ ಒಪ್ಪಂದಗಳನ್ನು ಬಿಡುಗಡೆ ಮಾಡಿದರು

ಸಿರಿಧಾನ್ಯಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ರೈತರಿಂದ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ವಿನೂತನ ಹೆಜ್ಜೆ ಇಟ್ಟಿರುವ ಯುವ ಉದ್ಯಮಿಗಳಾದ ಪ್ರಶಾಂತ್ ಎಸ್. ಬೆಳ್ಳೆರಿಮಠ, ಮಹೇಶ ಪಾಟೀಲ, ನಾಗರಾಜ್ ಮಾಲಿಂಗನವರ್ ಅವರ ಧೈರ್ಯ ಮೆಚ್ಚುವಂತದ್ದು. ಉತ್ಪನ್ನಗಳ ತಯಾರಿಕೆಗೆ ತರಬೇತಿ, ಮಾರುಕಟ್ಟೆ ಕೌಶಲ್ಯ ಕುರಿತು ಸಲಹೆ ನೀಡುವುದಲ್ಲದೇ ಇವರ ಹಿಂದೆ ಟೊಂಕ ಕಟ್ಟಿ ನಿಂತಿರುವ 'ಕೃಷಿ ಕಲ್ಪ' ಸಂಸ್ಥೆ ಕಾರ್ಯವು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಕೃಷಿಕಲ್ಪ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎಂ. ಪಾಟೀಲ ಮಾತನಾಡಿ, ಕಳೆದ 2017ರಿಂದ ರಾಜ್ಯ ಸರ್ಕಾರ ಇಡೀ ದೇಶಕ್ಕೆ ಮಾದರಿಯಾಗಿ ಪ್ರತಿ ವರ್ಷ 100 ನವೋದ್ಯಮಿಗಳಿಗೆ ಗರಿಷ್ಠ 50ಲಕ್ಷ ರೂ. ವರೆಗೆ ಪ್ರೋತ್ಸಾಹಧನ ನೀಡುತ್ತಿದೆ. ಪ್ರಸ್ತುತ 25 ಜನ ನವೋದ್ಯಮಿಗಳ ಪೈಕಿ 18ಜನ ಕಲ್ಯಾಣ ಕರ್ನಾಟಕ ಭಾಗದವರೆ ಆಯ್ಕೆಯಾಗಿದ್ದಾರೆ. ಸ್ಟಾರ್ಟ್ ಅಪ್ ಮಾಡುವ ನವೋದ್ಯಮಿಗಳಿಗೆ ಮಾರುಕಟ್ಟೆಯಲ್ಲಿನ ಬೇಡಿಕೆಗೆ ಅನುಗುಣವಾಗಿ ಮಾರುಕಟ್ಟೆ ಕೌಶಲ್ಯ, ಉತ್ಪನ್ನಗಳ ತಯಾರಿಕೆ, ಸಂಸ್ಕರಣೆ, ಮೌಲ್ಯಯುತ ಉತ್ಪನ್ನ ಮಾಡುವ ನಿಟ್ಟಿನಲ್ಲಿ ಕೃಷಿ ಕಲ್ಪ ಸಂಸ್ಥೆ ಅವರಿಗೆ ಎಲ್ಲಾ ರೀತಿಯಿಂದ ನೆರವು ನೀಡುತ್ತಿದೆ ಎಂದರು.

ಪ್ರೊವಿಫಿ ಸಂಸ್ಥೆ ನವೋದ್ಯಮವಾಗಿ ಸಾಂಪ್ರದಾಯಿಕ ಸಿರಿಧಾನ್ಯಗಳನ್ನು ಹೆಚ್ಚು ಅನುಕೂಲಕರ ಹಾಗೂ ಆಧುನಿಕ ರೂಪದಲ್ಲಿ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ, ಪ್ರೊವಿಫಿಯ ಆಕ್ಟಿವೇಟೆಡ್ ಮಿಲೆಟ್ ಉತ್ಪನ್ನಗಳ ಶ್ರೇಣಿ ಬಿಡುಗಡೆ ಮಾಡಲಾಗಿದೆ. ಭಾರತದಲ್ಲಿ ಆಹಾರದ ಕೊರತೆಯಿಲ್ಲ ಆದರೆ ಸಾಕಷ್ಟು ಪೌಷ್ಟಿಕಾಂಶದ ಅಗತ್ಯವಿದೆ. ಅದನ್ನು ಪ್ರೊವಿಫಿ ಪೂರೈಸುತ್ತಿದೆ. ಪ್ರತಿ ಸ್ಟಾರ್ಟ್ ಅಪ್ ಕಂಪನಿಗಳಿಂದ ಕನಿಷ್ಠ 4 ಜನರಿಗೆ ಉದ್ಯೋಗ ಸೃಜನೆಯಾಗುತ್ತಿದೆ ಎಂದು ತಿಳಿಸಿದರು.

ಕೃಷಿಕಲ್ಪ ಸಂಸ್ಥೆ ಉಪಾಧ್ಯಕ್ಷ ಈರಣ್ಣ ರೊಟ್ಟಿ ಯುವ ಉದ್ಯಮ ಯೋಜನೆ ಹೆಡ್ ಅಭಿನಂದನ್ ಕವಳೆ, ಉದ್ಯಮಿ ದೊಡ್ಡಪ್ಪ ನಿಷ್ಠಿ ಪ್ರೊಬೇಷನರ್ ಐ.ಎ.ಎಸ್ ಅಧಿಕಾರಿ ಹಿಬರ್ ಮೋಘಾ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್, ಕೃಷಿ ಕಲ ಸಂಸ್ಥೆಯ ಇನಿತರರು ಇದ್ದರು.

### ಸಾಂಪ್ರದಾಯಿಕ ಆಹಾರಕ್ಕೆ ಆಧುನಿಕ ಸ್ಪರ್ಶ

ಪೌಷ್ಟಿಕಾಂಶಭರಿತ ಸಾಂಪ್ರದಾಯಿಕ ಸಿರಿಧಾನ್ಯಗಳನ್ನು ಇಂದಿನ ಗ್ರಾಹಕರಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಗುರಿ ಹೊಂದಿದ್ದೇವೆ. ಸಿರಿಧಾನ್ಯಗಳ ನೈಸರ್ಗಿಕ ಗುಣ ಕಾಪಾಡುವತ್ತ ನಾವು ಬದ್ಧರಾಗಿದ್ದೇವೆ. ಈ ಉತ್ಪನ್ನ ಬಿಡುಗಡೆ ಕೇವಲ ಹೊಸ ಉತ್ಪನ್ನಗಳ ಪರಿಚಯವಲ್ಲ, ಇದು ಆರೋಗ್ಯಕರ ಆಹಾರ ಸಂಸ್ಕೃತಿ ನಿರ್ಮಿಸುವುದು, ರೈತರಿಗೆ ಹೆಚ್ಚಿನ ಮೌಲ್ಯ ಸೃಷ್ಟಿಸುವುದು ಮತ್ತು ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ನಮ್ಮ ಪ್ರಯತ್ನವಾಗಿದೆ ಎಂದು ನವೋದ್ಯಮಿಗಳಾದ ಪ್ರಶಾಂತ ಎಸ್. ಬೆಳ್ಳೆರಿಮಠ, ಮಹೇಶ ಪಾಟೀಲ ಹಾಗೂ ನಾಗರಾಜ್ ಮಾಲಿಂಗನವರ್ ತಿಳಿಸಿದರು.

'ಕೃಷಿಕಲ್ಪ' ಸಂಸ್ಥೆ ಬೆಂಬಲ ಮತ್ತು ಮಾರ್ಗದರ್ಶನದೊಂದಿಗೆ ಸಾಂಪ್ರದಾಯಿಕ ಸಿರಿಧಾನ್ಯಗಳಿಂದ ಆಧುನಿಕ ಪೌಷ್ಟಿಕತೆಯತ್ತ ಕೊಂಡೊಯ್ಯುವುದು ಪ್ರೊವಿಫಿ ಸಂಸ್ಥೆ ಉದ್ದೇಶವಾಗಿದೆ. ನಮ್ಮ ಈ ಸಿರಿಧಾನ್ಯಗಳನ್ನು ಏಳೆಂಟು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಯಾಂತ್ರಿಕವಾಗಿ ಒಣಗಿಸಿ ಹೈಜೀನ್ ಪ್ಯಾಕ್ ನೊಂದಿಗೆ ಮಾರಾಟ ಮಾಡಲಾಗುತ್ತಿದೆ. ಇದರಿಂದ ಮೆಟ್ರೋದಂತಹ ನಗರಗಳಲ್ಲಿ ತ್ವರಿತವಾಗಿ ಅಡುಗೆ ಮಾಡಲು ಗ್ರಾಹಕರಿಗೆ ಸಹಾಯವಾಗಲಿದ್ದು, ಅವರಿಗೆ ಸಮಯ ಉಳಿಯಲಿದೆ. ವಿಶೇಷವಾಗಿ ಈ ಉತ್ಪನ್ನಗಳಿಂದ ಶೀಘ್ರ ಜೀರ್ಣ ಸಹ ಆಗುತ್ತೆ ಎನ್ನುತ್ತಾರೆ ನವೋದ್ಯಮಿಗಳು.

ಸಂಜೆವಾಣಿ
Sanjevani / 2026-05-18, 2, Kalaburgi

# ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಪೂರಕ: ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ:ಮೇ.18:ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್(COE) ಕಲ್ಯಾಣಕರ್ನಾಟಕಭಾಗದಉದ್ಯಮ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ನಗರದ ಗೋಲ್ಡ್ ಹಬ್ ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟಿ - ಬಿಟಿ ಇಲಾಖೆ, ಕೆಕೆ ಆರ್ ಡಿಬಿ ಹಾಗೂ ಕೃಷಿಕಲ್ಪ ಅಡಿಯಲ್ಲಿ ಆಯೋಜಿಸಲಾಗಿದ್ದ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್(COE) ಉದ್ಘಾಟನೆ ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ 18,000 ನೂತನ ಸ್ಟಾರ್ಟ್ ಅಪ್ ಗಳು ಪ್ರಾರಂಭಕ್ಕೆಗೊಳ್ಳಲು ನೋಂದಣಿ ಮಾಡಿಕೊಂಡಿವೆ, ನವೋದ್ಯಮಕ್ಕೆ ಗೈಡೆನ್ಸ್, ಪೈಲೆಟ್ ಹಾಗೂ ಫಂಡಿಂಗ್ ಬೇಕೆ ಬೇಕು. ಇದಕ್ಕೆ ರೂ 50 ಲಕ್ಷ ಅನುದಾನ ಅಗತ್ಯವಿದೆ. ಸಧ್ಯ ರಾಜ್ಯ ಸರ್ಕಾರ ಒಟ್ಟು 1500 ಸ್ಟಾರ್ಟ್ ಅಪ್ ಗಳಿಗೆ ಈ ಅನುದಾನ ನೀಡಲು ತಯಾರಾಗಿದೆ.

ಬೆಂಗಳೂರು ಆಚೆಗೂ ಕೂಡಾ ಉದ್ಯಮ ಸ್ಥಾಪನೆಗೆ ಸರ್ಕಾರ ಆದ್ಯತೆ ನೀಡುತ್ತಿದ್ದು 'ಬಿಯಾಂಡ್ ಬೆಂಗಳೂರು' ಕಾರ್ಯಕ್ರಮದಡಿ ಬೆಂಗಳೂರು ಹೊರತುಪಡಿಸಿ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಹಾಗೂ ನವೋದ್ಯಮ ಸ್ಥಾಪನೆಗೆ ಮುಂದಾಗುವ ಸ್ಟಾರ್ಟ್ ಅಪ್ ಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ ಎಂದ ಸಚಿವರು ಟೈರ್ 2 ಹಾಗೂ 3 ನಗರಗಳ ಬೆಳವಣಿಗೆಗೆ ಹಾಗೂ ಉದ್ಯಮದ ಅಭಿವೃದ್ದಿಗೆ ಬೇಕಾಗುವ ಎಲ್ಲ ಕ್ರಮವಹಿಸಲು ಮುಂದಾಗಿದೆ ಎಂದರು.

ಮುಂಬರುವ ದಿನಗಳಲ್ಲಿನ ನವೋದ್ಯಮದ ಅಭಿವೃದ್ದಿಯನ್ನು ಪರಿಗಣಿಸಿ ಡೀಪ್ ಟೆಕ್ ಸ್ಟಾಪ್ ಪ್ರೋತ್ಸಾಹಕ್ಕಾಗಿ ಅನುದಾನ ನೀಡಲು ತಯಾರಿದ್ದು, ಮೈಸೂರಿನಲ್ಲಿ 402, ಮಂಗಳೂರಿನಲ್ಲಿ, 332, ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ 463 ಹಾಗೂ ಕಕ ಭಾಗದಲ್ಲಿ 282 ಸ್ಟಾರ್ಟ್ ಅಪ್ ಗಳಿದ್ದು, ಇವುಗಳಿಗೆ ರೂ 1,000 ಕೋಟಿ ಅನುದಾನವನ್ನು ನೀಡಿ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಇದರಿಂದ ಟೈರ್ 2 ಹಾಗೂ 3 ನಗರಗಳಲ್ಲಿ ಯುವ ಉದ್ಯಮಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಐಐಐಟಿರಾಯಚೂರುಗೆಹೋಗಿದ್ದು ಅಲ್ಲಿಗೆ ಅನುಕೂಲವಾಗುವಂತ ಉದ್ಯಮ ಸ್ಥಾಪನೆಗೆ ಬೇಕಾಗುವ ಮಾನವ ಸಂಪನ್ಮೂಲಗಳನ್ನು ಸೃಜಿಸಿ ಅವುಗಳನ್ನು ಒದಗಿಸಲು ಕೆಕೆ ಆರ್ ಡಿಬಿಯಿಂದ ಅನುದಾನ ಒದಗಿಸುವಂತೆ ಸಚಿವರು ಡಾ ಅಜಯ್ ಸಿಂಗ್ ಅವರಿಗೆ ಮನವಿ ಮಾಡಿದರು.

ಕಲಬುರಗಿ ರೊಟ್ಟಿ ಬ್ರಾಂಡ್ ದೇಶದಾದ್ಯಂತಹೆಸರುವಾಸಿಯಾಗಿದ್ದು ಕೆನಡಾ, ಅಮೇರಿಕಾ ಸೇರಿದಂತೆ ವಿವಿಧ ದೇಶಗಳಿಗೆ ರಫ್ತಾಗುತ್ತಿವೆ. ಇತ್ತೀಚಿಗೆ ಪುಣೆ ಮೂಲದ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಕಲಬುರಗಿಯಲ್ಲಿ ಮಹಿಳಾ ಸಂಘಗಳಿಂದ ತಯಾರಿಸಲಾದ ರೊಟ್ಟಿಗಳನ್ನು ಕಳುಹಿಸಲು ಮೂರು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ, ವರ್ಷವೊಂದಕ್ಕೆ 1 ಲಕ್ಷ ರೊಟ್ಟಿಗಳನ್ನು ಸರಬರಾಜು ಮಾಡಲಾಗುವುದು ಎಂದು ಹೇಳಿದ ಅವರು ಕಲಬುರಗಿ ಬ್ರಾಂಡ್ ರೊಟ್ಟಿಯ ಮೂಲಕ ಮಹಿಳಾ ಸಬಲೀಕರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು.

ಕೃಷಿ ವಲಯದ ಅಭಿವೃದ್ದಿ ಹಾಗೂ ಸಮಗ್ರ ಬೆಳವಣಿಗೆಗೆ ಸಹಕಾರಿಯಾಗುವಂತೆ ಕಲಬುರಗಿಯಲ್ಲಿ ಅಗ್ರಿಕಲ್ಚರ್ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಗೆ ಸರ್ಕಾರ ಮುಂದಾಗಿದ್ದು ಕೃಷಿ ವಲಯಕ್ಕಾಗಿ ಇಂತಹ ಒಂದು ಎಕ್ಸಲೆನ್ಸ್ ಸ್ಥಾಪನೆ ಮಾಡಲು ಮುಂದಾಗಿದ್ದುದು ದೇಶದಲ್ಲೇ ಮೊದಲನೆಯದಾಗಲಿದೆ. ಇದು ಕೃಷಿ ವಲಯದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಸುಮಾರು 22,000 ಎಕರೆ ಪ್ರದೇಶದಲ್ಲಿ ನ್ಯಾಷನಲ್ ಇನ್ ವೆಸ್ಟ್ ಮೆಂಟ್ ಮ್ಯಾನು ಫ್ಯಾಕ್ಚರಿಂಗ್ ಜೋನ್ (NIMZ- ರಾಷ್ಟ್ರೀಯ ಹೂಡಿಕೆ ಉತ್ಪಾದನಾ ವಲಯ) ನಿರ್ಮಾಣಕ್ಕೆ ಈ ಹಿಂದೆ ಕ್ರಮವಹಿಸಲಾಗಿತ್ತು. ಆದರೆ, ಆ ಸಂದರ್ಭದಲ್ಲಿ ಖರ್ಗೆ ಸಾಹೇಬರು ಚುನಾವಣೆಯಲ್ಲಿ ಹಿನ್ನೆಡೆ ಅನುಭವಿಸಿದ್ದರಿಂದ ಅದು ಅಲ್ಲಿಗೆ ನಿಂತು ಹೋಯಿತು ಇಲ್ಲದಿದ್ದರೆ ಈ ಭಾಗದ ಉದ್ಯಮ ಬೆಳವಣಿಗೆ ಸಹಕಾರಿಯಾಗುತ್ತಿತ್ತು ಎಂದರು.

ಕೆಕೆಆರ್ ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ ಅಜಯ್ ಸಿಂಗ್ ಮಾತನಾಡಿ, ಸರ್ಕಾರ, ಕೆಕೆಆರ್ ಡಿಬಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತವಾರಣ ನಿರ್ಮಾಣಕ್ಕೆ ಮುಂದಾಗಿದ್ದು, ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪ ದೊಂದಿಗೆ ಒಗ್ಗೂಡಿ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ (COE) ಕಾರ್ಯಕ್ರಮ ರೂಪಿಸಿದೆ ಇವುಗಳ ಅಡಿಯಲ್ಲಿ ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದರು.

ಮುಂಬರುವ ಐದು ಅಥವಾ ಹತ್ತು ವರ್ಷದಲ್ಲಿ ಈ ಭಾಗಕ್ಕೆ ನೀಡಬೇಕಾದ ಅನುದಾನದ ಬಗ್ಗೆ ಅಗತ್ಯ ಕ್ರಮವಹಿಸಲಾಗುತ್ತಿದೆ. ಗೋವಿಂದ್ ರಾವ್ ವರದಿಯಂತೆ ಕಕಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುವುದು. ಕೃಷಿಕಲ್ಪಕ್ಕೆ ಕೆಕೆಆರ್ ಡಿಬಿ ಬೆನ್ನೆಲುಬಾಗಿ ನಿಂತು ಈ ಭಾಗದಲ್ಲಿ ಉದ್ಯಮ ಬೆಳವಣಿಗೆಗೆ ಎಲ್ಲ ಅಗತ್ಯ ಸಹಕಾರ ನೀಡಲು ಬದ್ಧವಾಗಿದೆ ಎಂದರು.

ವೇದಿಕೆ ಮೇಲೆ ಕೆಕೆಆರ್ಡಿಬಿ ಅಧ್ಯಕ್ಷ ಡಾ ಅಜಯ್ ಸಿಂಗ್, ಶಾಸಕರಾದ ಎಂ ವೈ ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂ ಎಲ್ ಸಿ ಜಗದೇವ ಗುತ್ತೇದಾರ, ಚಂದ್ರಿಕಾ ಪರಮೇಶ್ವರ, ಅರುಣ್ ಕುಮಾರ್ ಎಂ ವೈ ಪಾಟೀಲ, ಪ್ರವೀಣ್ ಹರವಾಳ, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್, ಸಿಇಓ ಭಂವರ್ ಸಿಂಗ್ ಮೀನಾ, ಕಮೀಷನರ್ ಡಾ ಶರಣಪ್ಪ ಢಗೆ, ಮಹಾನಗರ ಪಾಲಿಕೆ ಕಮೀಷನರ್ ಅವಿನಾಶ ಶಿಂಧೆ, ಎಸ್ ಪಿ ಅಡ್ಡೂರು ಶ್ರೀನಿವಾಸಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ, ಕೃಷಿಕಲ್ಪದ ಸಿಇಓ ಸಿಎಂ ಪಾಟೀಲ್ ಸೇರಿದಂತೆ ಹಲವರಿದ್ದರು.

# KrishiKalpa Centre of Excellence to boost industries in KK region

The Hindu Bureau
KALABURAGI



Minister Priyank Kharge addressing a gathering after inaugurating the KrishiKalpa Centre of Excellence in Kalaburagi on Monday. SPECIAL ARRANGEMENT

The KrishiKalpa Centre of Excellence will significantly contribute to strengthening industrial and entrepreneurial growth in the Kalyana Karnataka region, Minister Priyank Kharge has said.

He was speaking after inaugurating the KrishiKalpa Centre of Excellence and the Vikas and Prerana programmes in Kalaburagi on Monday.

The event was jointly organised by the Rural Development and Panchayat Raj Department, IT-BT Department, the Kalyana Karnataka Region Development Board and KrishiKalpa.

Mr. Kharge said that nearly 18,000 start-ups have registered in the State underscoring the need for stronger support systems, including guidance, pilot projects and funding.

He said that the State government has planned financial assistance for 1,500 start-ups, with an estimated support of ₹50 lakh per start-up.

Highlighting the Beyond Bengaluru initiative, he said that the State is actively promoting start-up ecosystems in Mysuru, Mangaluru, Hubballi-Dharwad, Belagavi and Kalaburagi.

He added that the State government is prioritising Tier 2 and Tier 3 cities to ensure balanced regional development and entrepreneurship growth.

The Minister also noted that the State government is preparing support for deep-tech start-ups. He said that Mysuru has 402 start-ups, Mangaluru 332, Hubballi-Dharwad 463 and the Kalyana Karnataka region 282 start-ups.

A total of ₹1,000 crore is being mobilised to support start-ups across these regions.

Mr. Kharge requested support from the region development board for developing industry-ready human resources at IIIT Raichur, aimed at strengthening skilled manpower for emerging industries in the region.

He also highlighted the success of Kalaburagi roti which has gained international recognition and is being exported to countries such as Canada and the United States.

A recent three-year agreement with a Pune-based company will enable women's self-help groups in Kalaburagi to supply around one lakh rotis annually, supporting women's empowerment.

The Minister announced plans to establish an Agricultural Centre of Excellence in Kalaburagi which will be the first of its kind in India dedicated to the agriculture sector.

Referring to past industrial initiatives, he said that the proposed National Investment and Manufacturing Zone (NIMZ) in Chittapur taluk, over 22,000 acres, did not progress due to political set-backs, affecting industrial development in the region.

KKRDB Chairman Ajay Singh said that the government and KKRDB are committed to creating a strong ecosystem for industrial growth in Kalyana Karnataka.

He said that the KrishiKalpa Centre of Excellence and associated programmes aim to promote and support young entrepreneurs with enhanced funding planned over the next five to 10 years in line with the Govind Rao Committee recommendations.

**Vikas and Prerana**

The KrishiKalpa Centre of Excellence and the Vikas and Prerana programmes were launched in Kalaburagi in collaboration with the State government, K-Tech, Start-up Karnataka and the Karnataka Digital Economy Mission.

The initiative aims to promote entrepreneurship beyond metro cities, especially in Kalyana Karnataka.

Prerana is a 12-week pre-incubation programme, while Vikas offers 12-month incubation support for select start-ups, along with mentoring, funding access and ecosystem development to strengthen regional innovation and job creation.

## ಪ್ರೊವಿಷ್ಯೆ ಸಕ್ರಿಯಗೊಳಿಸಿದ ಸಿರಿಧಾನ್ಯ ಉತ್ಪನ್ನಗಳ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿ ಇಕ್ರಂ ಶರೀಫ್

# ಸಿರಿಧಾನ್ಯಗಳು ಪೌಷ್ಟಿಕಾಂಶದ ಉತ್ಪನ್ನ

■ **ವಿಕ ಸುದ್ದಿಲೋಕ** ಕಲಬುರಗಿ

ಗ್ರಾಹಕರಿಗೆ ಸುಲಭವಾಗಿ ಮತ್ತು ಅನುಕೂಲಕರವಾಗಿ ತಲುಪಿಸುವ ನಿಟ್ಟಿನಲ್ಲಿ ಮೂವರು ಯುವ ಉದ್ಯಮಿಗಳ ಸೇರಿ ತಯಾರಿಸಿರುವ ಪ್ರೊವಿಷ್ಯೆ ಸಂಸ್ಥೆಯ ಸಕ್ರಿಯಗೊಳಿಸಿದ ಸಿರಿಧಾನ್ಯಗಳು ಪೌಷ್ಟಿಕಾಂಶದ ಉತ್ಪನ್ನಗಳಾಗಿವೆ ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

ನಗರದ ಗಾಜೀಪುರ ಪ್ರದೇಶದ ಕೃಷಿ ಕಲ್ಪ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಬುಧವಾರ ಪ್ರೊವಿಷ್ಯೆ ಫುಡ್ಸ್ ಪ್ರೈ. ಲಿ. ಸಂಸ್ಥೆಯಿಂದ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿದ ನವಣೆ, ಊದಲು, ಸಾಮೆ, ಹಾರಕಾ ಹಾಗೂ ಕೊರಲೆ ಸಿರಿಧಾನ್ಯಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ಕೃಷಿಕಲ್ಪ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ. ಎಂ.ಪಾಟೀಲ್ ಮಾತನಾಡಿ, ಕಳೆದ 2017 ರಿಂದ ರಾಜ್ಯ ಸರಕಾರದ ಇಡೀ ದೇಶಕ್ಕೆ ಮಾದರಿಯಾಗಿ ಪ್ರತಿ ವರ್ಷ 100 ನವೋದ್ಯಮಿಗಳಿಗೆ ಗರಿಷ್ಠ 50 ಲಕ್ಷ ರೂ. ವರೆಗೆ ಪ್ರೋತ್ಸಾಹಧನ ನೀಡುತ್ತಿದೆ. ಪ್ರಸ್ತುತ 25 ಜನ ನವೋದ್ಯಮಿಗಳ ಪೈಕಿ 18 ಜನ ಕಲ್ಯಾಣ ಕರ್ನಾಟಕ ಭಾಗದವರೆ ಆಯ್ಕೆಯಾಗಿದ್ದಾರೆ. ಸ್ಟಾರ್ಟ್ ಅಪ್ ಮಾಡುವ ನವೋದ್ಯಮಿಗಳಿಗೆ ಮಾರುಕಟ್ಟೆಯಲ್ಲಿನ ಬೇಡಿಕೆ ಅನುಗುಣವಾಗಿ ಮಾರುಕಟ್ಟೆ ಕೌಶಲ, ಉತ್ಪನ್ನಗಳ ತಯಾರಿಕೆ, ಸಂಸ್ಕರಣೆ, ಮೌಲ್ಯಯುತ ಉತ್ಪನ್ನ ಮಾಡುವ ನಿಟ್ಟಿನಲ್ಲಿ ಕೃಷಿ ಕಲ್ಪ ಸಂಸ್ಥೆ ಅವರಿಗೆ ಎಲ್ಲಾ ರೀತಿಯಿಂದ ನೆರವು ನೀಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿಕಲ್ಪ ಸಂಸ್ಥೆಯ ಉಪಾಧ್ಯಕ್ಷ ಈರಣ್ಣ ರೊಟ್ಟೆ, ಯುವ ಉದ್ಯಮ ಯೋಜನೆ ಹೆಡ್ ಅಭಿನಂದನ್ ಕವಳೆ, ಉದ್ಯಮಿ ದೊಡ್ಡಪ್ಪ ನಿಷ್ಠಿ ಪ್ರೊಬೇಷನರ್ ಐ.ಎ.ಎಸ್. ಅಧಿಕಾರಿ ಶಿಖರ್ ಮೋಘಾ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್, ಕೃಷಿ ಕಲ್ಪ ಸಂಸ್ಥೆಯ ಇನ್ನಿತರರು ಇದ್ದರು.



ನಗರದ ಗಾಜೀಪುರ ಪ್ರದೇಶದ ಕೃಷಿ ಕಲ್ಪ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿದ ಸಿರಿಧಾನ್ಯಗಳನ್ನು ಬಿಡುಗಡೆ ಮಾಡಲಾಯಿತು.

ಕಲಾಣ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಹೂಡಿಕೆ, ಬಂಡವಾಳ ಹಾಕಲೆಂದೆ ರಾಜ್ಯ ಸರಕಾರವು ಎಲಿವೇಟ್ ಕರ್ನಾಟಕ ಮತ್ತು ಲೀಪ್ ಯೋಜನೆ ಜಾರಿಗೊಳಿಸಿದೆ. ಬೆಂಗಳೂರುದಾಚೆ ಟೈರ್-2, ಟೈರ್-3 ಸಿಟಿಯಲ್ಲಿ ಸ್ಥಳೀಯ ಆರ್ಥಿಕ ಚಟುವಟಿಕೆಗೆಳಿಗೆ ವೇಗ ನೀಡುವುದು ಇದರ ಮೂಲ ಉದ್ದೇಶವಾಗಿದೆ. ಎಲಿವೇಟ್ ಕರ್ನಾಟಕದಲ್ಲಿ ಯುವ ಉದ್ಯಮಿಗಳಿಗೆ ಸ್ಟಾರ್ಟ್ ಅಪ್ ನಡಿ ಸರ್ಕಾರ ಸಹಾಯಧನ ನೀಡುತ್ತಿದ್ದು, ಯುವ ಉದ್ಯಮಿಗಳು ಇದರ ಲಾಭ ಪಡೆಯಬೇಕು.

**- ಇಕ್ರಂ ಷರೀಫ್**, ಜಿಲ್ಲಾಧಿಕಾರಿ

### ಸಾಂಪ್ರದಾಯಿಕ ಸಿರಿಧಾನ್ಯ, ಆಧುನಿಕ ಪೌಷ್ಟಿಕತೆಯತ್ತ

ಪೌಷ್ಟಿಕಾಂಶಭರಿತ ಸಾಂಪ್ರದಾಯಿಕ ಸಿರಿಧಾನ್ಯಗಳನ್ನು ಇಂದಿನ ಗ್ರಾಹಕರಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಗುರಿ ಹೊಂದಲಾಗಿದೆ. ಸಿರಿಧಾನ್ಯಗಳ ನೈಸರ್ಗಿಕ ಗುಣಗಳನ್ನು ಕಾಪಾಡಲು ನಾವು ಬದ್ಧರಾಗಿದ್ದೇವೆ. ಈ ಉತ್ಪನ್ನ ಬಿಡುಗಡೆ ಕೇವಲ ಹೊಸ ಉತ್ಪನ್ನಗಳ ಪರಿಚಯವಲ್ಲ, ಇದು ಆರೋಗ್ಯಕರ ಆಹಾರ ಸಂಸ್ಕೃತಿಯನ್ನು ನಿರ್ಮಿಸುವುದು, ರೈತರಿಗೆ ಹೆಚ್ಚಿನ ಮೌಲ್ಯ ಸೃಷ್ಟಿಸುವುದು ಮತ್ತು ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ನಮ್ಮ ಪ್ರಯತ್ನವಾಗಿದೆ ಎಂದು ನವೋದ್ಯಮಿಗಳಾದ ಪ್ರಶಾಂತ್ ಎಸ್. ಬೆಳ್ಳಿರಿಮಠ್, ಮಹೇಶ ಪಾಟೀಲ್ ಹಾಗೂ ನಾಗರಾಜ ಮರಲಿಂಗಣ್ಣವರ ಅವರು ಅಭಿಪ್ರಾಯಪಟ್ಟರು. ಕೃಷಿಕಲ್ಪ ಸಂಸ್ಥೆಯ ಬೆಂಬಲ ಮತ್ತು ಮಾರ್ಗದರ್ಶನದೊಂದಿಗೆ ಸಾಂಪ್ರದಾಯಿಕ ಸಿರಿಧಾನ್ಯಗಳಿಂದ ಆಧುನಿಕ ಪೌಷ್ಟಿಕತೆಯತ್ತ ಕೊಂಡೊಯ್ಯುವುದು ಪ್ರೊವಿಷ್ಯೆ ಉದ್ದೇಶವಾಗಿದೆ. ನಮ್ಮ ಈ ಸಿರಿಧಾನ್ಯಗಳು 7-8 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಯಾಂತ್ರಿಕವಾಗಿ ಒಣಗಿಸಿ ಹೈಜೀನ್ ಪ್ಯಾಕ್ ನೊಂದಿಗೆ ಮಾರಾಟ ಮಾಡಲಾಗುತ್ತಿದೆ ಎಂದರು.

ಕಲಬುರಗಿಯಲ್ಲಿ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಇಒ) ಉದ್ಘಾಟನೆ

# ನವೋದ್ಯಮಗಳ ಸಂಖ್ಯೆ ಹೆಚ್ಚಳಕ್ಕೆ ಪ್ರಯತ್ನ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಿಯಾಂಡ್ ಬೆಂಗಳೂರು ನೀತಿಯಡಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ನವೋದ್ಯಮಗಳ ಸಂಖ್ಯೆ ಹೆಚ್ಚಿಸಲು ಕೃಷಿಕಲ್ಪದ ಮೂಲಕ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ' ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಐಟಿ–ಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ ಕೃಷಿಕಲ್ಪದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಈ ನೀತಿಯಡಿ ಈಗಾಗಲೇ ಮೈಸೂರಿನಲ್ಲಿ 402, ಮಂಗಳೂರು 332, ಹುಬ್ಬಳ್ಳಿ–ಧಾರವಾಡ, ಬೆಳಗಾವಿ 463 ಹಾಗೂ ಕಲಬುರಗಿಯಲ್ಲಿ 280 ನವೋದ್ಯಮಗಳನ್ನು ಆರಂಭಿಸಲಾಗಿದೆ. ಈ ಸಂಖ್ಯೆಯ ಹೆಚ್ಚಳಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಇದರ ಭಾಗವಾಗಿಯೇ ನಗರದ ಕಿಯೊನಿಕ್ಸ್ ಸಂಸ್ಥೆ ಕಚೇರಿ ಪಕ್ಕದಲ್ಲಿ ಟೆಕ್ ಪಾರ್ಕ್‌ಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಇದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ' ಎಂದರು.

'ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಸಚಿವರಿದ್ದಾಗ ಮ್ಯಾನುಫ್ಯಾಕ್ಚರಿಂಗ್ ಝೋನ್ ಆಗಬೇಕಿತ್ತು, ಕಲಬುರಗಿ ಹಾಗೂ ತುಮಕೂರು ಎರಡಕ್ಕೂ ಒಟ್ಟಿಗೆ ಅನುಮೋದನೆ ಸಿಕ್ಕಿತ್ತು. ತುಮಕೂರಿನಲ್ಲಿ ಆಗಿದೆ. ಇಲ್ಲಿ ಖರ್ಗೆ ಅವರು ಸೋತ ಬಳಿಕ

> ಕಲ್ಯಾಣ ಕರ್ನಾಟಕದ ಜಿಡಿಪಿ ರಾಜ್ಯದ ಸರಾಸರಿಗಿಂತ ಕಡಿಮೆ ಇದೆ. ಇದನ್ನು ಹೆಚ್ಚಿಸಲು ಉದ್ಯಮಗಳನ್ನು ಆರಂಭಿಸುವುದು ಅಗತ್ಯ. ಸಿಒಇ ಕೇಂದ್ರ ನವೋದ್ಯಮಗಳಿಗೆ ಪೂರಕ ವಾತಾವರಣ ನಿರ್ಮಿಸಲಿದೆ
>
> **ಇಕ್ರಮ್ ಶರೀಫ್** ಜಿಲ್ಲಾಧಿಕಾರಿ

ಅದರ ಕುರಿತು ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಕಾರಣ ಅದು ಕೈ ತಪ್ಪಿತು' ಎಂದರು.

'ಮುಂದೆ ಹೀಗಾಗಬಾರದು ಎನ್ನುವ ಕಾರಣಕ್ಕೆ ಕಲಬುರಗಿ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಣ್ಣ ಹೆಜ್ಜೆ ಇಟ್ಟಿದ್ದೇವೆ. ಕೃಷಿಕಲ್ಪದ ಮೂಲಕ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ಮಾಡಿದ್ದೇವೆ. ಈ ಭಾಗದಲ್ಲಿ ನವೋದ್ಯಮಕ್ಕೆ ಪೂರಕ ವಾತಾವರಣ ನಿರ್ಮಾಣ ಮಾಡುತ್ತಿದ್ದೇವೆ. ಕೃಷಿ ಸಂಬಂಧಿ ನವೋದ್ಯಮಗಳ ಮೂಲಕ ಆ ಕೆಲಸ ಆರಂಭ ಮಾಡುತ್ತಿದ್ದೇವೆ' ಎಂದು ಹೇಳಿದರು.

'ನವೋದ್ಯಮಕ್ಕೆ ಮಾರ್ಗದರ್ಶನ, ಅದನ್ನು ನಡೆಸುವವರು ಮತ್ತು ಅನುದಾನ ಬೇಕು. ಕರ್ನಾಟಕದಲ್ಲಿ 18,000 ನವೋದ್ಯಮಗಳು ನೋಂದಣಿಯಾಗಿವೆ. ಎಲಿವೇಟ್ ಯೋಜನೆಯಡಿ ನವೋದ್ಯಮಗಳಿಗೆ ₹50 ಲಕ್ಷ ಸಹಾಯಧನ ನೀಡಲಾಗುತ್ತದೆ. ಇಲ್ಲಿಯವರೆಗೂ 1,500 ನವೋದ್ಯಮಗಳಿಗೆ ಸಹಾಯಧನ ನೀಡಿದ್ದೇವೆ. ಕಲ್ಯಾಣ ಕರ್ನಾಟಕಕ್ಕೂ ವಿಸ್ತರಿಸಲಾಗಿದೆ. ಶೇ 32ರಷ್ಟು ನವೋದ್ಯಮಗಳ ಮೂಲ ಬೆಂಗಳೂರು ಆಚೆಗಿನ ನಗರಗಳಾಗಿವೆ. ಅದರಲ್ಲಿ ಶೇ 28ರಷ್ಟು ನವೋದ್ಯಮಗಳನ್ನು ಮಹಿಳೆಯರು ನಡೆಸುತ್ತಿದ್ದಾರೆ' ಎಂದು ಹೇಳಿದರು.

'ಎಲಿವೇಟ್ ನೆಕ್ಸ್ಟ್ ಯೋಜನೆಯಡಿ ಡೀಪ್ ಟೆಕ್ ನವೋದ್ಯಮಗಳಿಗೆ ₹1 ಕೋಟಿ ಸಹಾಯಧನ ನೀಡಲಾಗುತ್ತಿದೆ. 15–20 ದಿನ ಮಾತ್ರ ನೋಂದಣಿಗೆ ಅವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ 935 ನವೋದ್ಯಮಗಳು ನೋಂದಣಿ ಮಾಡಿಕೊಂಡಿವೆ' ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ಕೆಕೆಆರ್‌ಟಿಸಿ ಅಧ್ಯಕ್ಷ ಅರುಣ ಕುಮಾರ ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಜಿ.ಪಂ ಸಿಇಒ ಭಂವರ್ ಸಿಂಗ್ ಮೀನಾ, ನಗರ ಪೊಲೀಸ್ ಆಯುಕ್ತ ಶರಣಪ್ಪ ಎಸ್.ಡಿ., ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು, ಕೃಷಿಕಲ್ಪದ ಸಿಇಒ ಸಿ.ಎಂ.ಪಾಟೀಲ ಹಾಜರಿದ್ದರು.



ಕಲಬುರಗಿಯಲ್ಲಿ ಐಟಿ–ಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ ಕೃಷಿಕಲ್ಪದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿದರು

## 'ಪೂರಕ ವಾತಾವರಣ ನಿರ್ಮಾಣ'

'ಸರ್ಕಾರ, ಕೆಕೆಆರ್‌ಡಿಬಿ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಾಣಕ್ಕೆ ಮುಂದಾಗಿದ್ದು, ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪದೊಂದಿಗೆ ಒಗ್ಗೂಡಿ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಇಒ) ಸ್ಥಾಪಿಸಲಾಗಿದೆ. ವಿಕಾಸ ಮತ್ತು ಪ್ರೇರಣಾ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ' ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ ಸಿಂಗ್ ತಿಳಿಸಿದರು.

'ಗೋವಿಂದ ರಾವ್ ವರದಿಯಂತೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ಅನುದಾನ ಒದಗಿಸಲಾಗುವುದು. ಕೃಷಿಕಲ್ಪಕ್ಕೆ ಕೆಕೆಆರ್‌ಡಿಬಿ ಬೆನ್ನೆಲುಬಾಗಿ ನಿಂತು ಈ ಭಾಗದಲ್ಲಿ ಉದ್ದಿಮೆಗಳ ಬೆಳವಣಿಗೆಗೆ ಎಲ್ಲ ರೀತಿಯ ಸಹಕಾರ ನೀಡಲು ಬದ್ಧವಾಗಿದೆ' ಎಂದರು.

# ಕಲ್ಯಾಣದ ಉದ್ಯಮ ಬೆಳವಣಿಗೆಗೆ 'ಕೃಷಿಕಲ್ಪ' ಪೂರಕ

## ಸಚಿವ ಪ್ರಿಯಾಂಕ್ ಖರ್ಗೆ ಅಭಿಮತ । 'ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್' ಉದ್ಘಾಟನೆ

**ಸಂ.ಕ.ಸಮಾಚಾರ ಕಲಬುರಗಿ:** ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಮತ್ತು ನವೋದ್ಯಮಗಳ ಬೆಳವಣಿಗೆಗೆ ಮೈಲಿಗಲ್ಲಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದ ಗೋಲ್ಡ್ ಹಬ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಐಟಿ-ಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ ಕೃಷಿಕಲ್ಪ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್', 'ವಿಕಾಸ' ಹಾಗೂ 'ಪ್ರೇರಣಾ' ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯದಲ್ಲಿ ನವೋದ್ಯಮಗಳನ್ನು ಪ್ರೋತ್ಸಾಹಿಸಲು ಸರ್ಕಾರ ಹಲವು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಕರ್ನಾಟಕದಲ್ಲಿ ಈಗಾಗಲೇ 18,000 ನೂತನ ಸ್ಟಾರ್ಟ್ ಅಪ್‌ಗಳು ನೋಂದಾಯಿಸಿಕೊಂಡಿವೆ.

ನವೋದ್ಯಮಗಳಿಗೆ ಮಾರ್ಗದರ್ಶನ, ಪೈಲಟ್ ಹಾಗೂ ಫಂಡಿಂಗ್ ಅತ್ಯಗತ್ಯವಾಗಿದ್ದು, ತಲಾ 50 ಲಕ್ಷ ರೂ.ಗಳಂತೆ ಒಟ್ಟು 1,500 ಸ್ಟಾರ್ಟ್ ಅಪ್‌ಗಳಿಗೆ ಅನುದಾನ ನೀಡಲು ಸರ್ಕಾರ ಸಿದ್ಧವಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಡೀಪ್ ಟೆಕ್ ಸ್ಟಾರ್ಟ್‌ಅಪ್‌ಗಳ ಪ್ರೋತ್ಸಾಹಕ್ಕಾಗಿ ಸರ್ಕಾರ 1,000 ಕೋಟಿ ರೂ. ಅನುದಾನ ನೀಡುತ್ತಿದೆ. ಸದ್ಯ ಮೈಸೂರಿನಲ್ಲಿ 402, ಮಂಗಳೂರಿನಲ್ಲಿ 332, ಹುಬ್ಬಳ್ಳಿ–ಧಾರವಾಡದಲ್ಲಿ 463 ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ 282 ಸ್ಟಾರ್ಟ್ ಅಪ್‌ಗಳಿದ್ದು, ಇವುಗಳಿಗೆ ಈ ನಿಧಿ ಸಹಕಾರಿಯಾಗಲಿದೆ ಎಂದರು.



ನಗರದ ಗೋಲ್ಡ್ ಹಬ್‌ನಲ್ಲಿ ಆಯೋಜಿಸಲಾಗಿದ್ದ 'ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್', 'ವಿಕಾಸ' ಹಾಗೂ 'ಪ್ರೇರಣಾ' ಕಾರ್ಯಕ್ರಮಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು.

ಬೆಂಗಳೂರು ಹೊರತುಪಡಿಸಿ ಟೈರ್ 2 ಮತ್ತು ಟೈರ್ 3 ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಿಸಲು 'ಬಿಯಾಂಡ್ ಬೆಂಗಳೂರು' ಕಾರ್ಯಕ್ರಮದಡಿ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ. ಇದೇ ವೇಳೆ, ಐಐಐಟಿ ರಾಯಚೂರಿಗೆ ಪೂರಕವಾದ ಉದ್ಯಮ ಸ್ಥಾಪನೆಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸೃಜಿಸಲು ಕೆಕೆಆರ್‌ಡಿಬಿಯಿಂದ ಅನುದಾನ ಒದಗಿಸುವಂತೆ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್‌ಸಿಂಗ್ ಅವರಿಗೆ ಸಚಿವರು ಮನವಿ ಮಾಡಿದರು.

ಕೃಷಿ ವಲಯದ ಸಮಗ್ರ ಬೆಳವಣಿಗೆಗಾಗಿ ಕಲಬುರಗಿಯಲ್ಲಿ 'ಅಗ್ರಿಕಲ್ಚರ್ ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಕೃಷಿ ಕ್ಷೇತ್ರಕ್ಕಾಗಿ ಇಂತಹದ್ದೊಂದು ಎಕ್ಸಲೆನ್ಸ್ ಸೆಂಟರ್ ಸ್ಥಾಪಿಸುತ್ತಿರುವುದು ದೇಶದಲ್ಲೇ ಮೊದಲನೆಯದಾಗಿದೆ ಎಂದು ಸಚಿವರು ಹೆಮ್ಮೆಯಿಂದ ಸಾರಿದರು.

ವೇದಿಕೆಯಲ್ಲಿ ಶಾಸಕರಾದ ಎಂ.ವೈ. ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂಎಲ್‌ಸಿ ಜಗದೇವ ಗುತ್ತೇದಾರ್, ಚಂದ್ರಿಕಾ ಪರಮೇಶ್ವರ್, ಕೆಕೆಆರ್‌ಟಿಸಿ ಅಧ್ಯಕ್ಷ ಅರುಣ್ ಕುಮಾರ್ ಎಂ.ವೈ. ಪಾಟೀಲ್, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಹರವಾಳ್, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಶರೀಫ್, ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಪೊಲೀಸ್ ಆಯುಕ್ತ ಡಾ. ಶರಣಪ್ಪ ಢಗೆ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂದೆ, ಎಸ್ಪಿ ಅಡ್ಡೂರು ಶ್ರೀನಿವಾಸಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ ಆಲದಕಟ್ಟಿ ಹಾಗೂ ಕೃಷಿಕಲ್ಪ ಸಂಸ್ಥೆಯ ಸಿಇಒ ಸಿ.ಎಂ. ಪಾಟೀಲ್ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

### ಕೃಷಿಕಲ್ಪಕ್ಕೆ ಕೆಕೆಆರ್‌ಡಿಬಿ ಬೆನ್ನೆಲುಬು

"ಕಲ್ಯಾಣ ಕರ್ನಾಟಕ ಭಾಗದಲ್ಲಿ ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪದೊಂದಿಗೆ ಕೈಜೋಡಿಸಿ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಮುಂಬರುವ 5 ರಿಂದ 10 ವರ್ಷಗಳಲ್ಲಿ ಗೋವಿಂದ್ ರಾವ್ ವರದಿಯಂತೆ ಈ ಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಕೃಷಿಕಲ್ಪದ ಉದ್ಯಮ ಬೆಳವಣಿಗೆಗೆ ಕೆಕೆಆರ್‌ಡಿಬಿ ಬೆನ್ನೆಲುಬಾಗಿ ನಿಲ್ಲಲಿದೆ.

■ ಡಾ. ಅಜಯ್ ಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ

# ಉದ್ಯಮ ಬೆಳವಣಿಗೆಗೆ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಪೂರಕ: ಸಚಿವ ಖರ್ಗೆ



ಉದಯಕಾಲ ನ್ಯೂಸ್

ಕಲಬುರಗಿ: ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ (ಅಔಇ) ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗೋಲ್ಡ್ ಹಬ್ ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟಿ - ಬಿಟಿ ಇಲಾಖೆ, ಕೆಕೆ ಆರ್ ಡಿಬಿ ಹಾಗೂ ಕೃಷಿಕಲ್ಪ ಅಡಿಯಲ್ಲಿ ಆಯೋಜಿಸಲಾಗಿದ್ದ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ (ಅಔಇ) ಉದ್ಘಾಟನೆ ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ 18,000 ನೂತನ ಸ್ಟಾರ್ಟ್ ಅಪ್ ಗಳು ಪ್ರಾರಂಭಕ್ಕೆಗೊಳ್ಳಲು ನೋಂದಣಿ ಮಾಡಿಕೊಂಡಿವೆ. ನವೋದ್ಯಮಕ್ಕೆ ಗೈಡೆನ್ಸ್, ಪೈಲೆಟ್ ಹಾಗೂ ಫಂಡಿಂಗ್ ಬೇಕೆ ಬೇಕು. ಇದಕ್ಕೆ ರೂ 50 ಲಕ್ಷ ಅನುದಾನ ಅಗತ್ಯವಿದೆ. ಸಧ್ಯ ರಾಜ್ಯ ಸರ್ಕಾರ ಒಟ್ಟು 1500 ಸ್ಟಾಟ್ ್ ಅಪ್ ಗಳಿಗೆ ಈ ಅನುದಾನ ನೀಡಲು ತಯಾರಾಗಿದೆ.

ಕೆಕೆಆರ್ ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ ಅಜಯ್ ಸಿಂಗ್ ಮಾತನಾಡಿ, ಸರ್ಕಾರ, ಕೆಕೆಆರ್ ಡಿಬಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತವಾರಣ ನಿರ್ಮಾಣಕ್ಕೆ ಮುಂದಾಗಿದ್ದು, ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪ ದೊಂದಿಗೆ ಒಗ್ಗೂಡಿ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ (ಅಔಇ) ಕಾರ್ಯಕ್ರಮ ರೂಪಿಸಿದೆ ಇವುಗಳ ಅಡಿಯಲ್ಲಿವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದರು.

ಮುಂಬರುವ ಐದು ಅಥವಾ ಹತ್ತು ವರ್ಷದಲ್ಲಿ ಈ ಭಾಗಕ್ಕೆ ನೀಡಬೇಕಾದ ಅನುದಾನದ ಬಗ್ಗೆ ಅಗತ್ಯ ಕ್ರಮವಹಿಸಲಾಗುತ್ತಿದೆ. ಗೋವಿಂದ್ ರಾವ್ ವರದಿಯಂತೆ ಕಕಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುವುದು. ಕೃಷಿಕಲ್ಪಕ್ಕೆ ಕೆಕೆಆರ್ ಡಿಬಿ ಬೆನ್ನೆಲುಬಾಗಿ ನಿಂತು ಈ ಭಾಗದಲ್ಲಿ ಉದ್ಯಮ ಬೆಳವಣಿಗೆಗೆ ಎಲ್ಲ ಅಗತ್ಯ ಸಹಕಾರ ನೀಡಲು ಬದ್ಧವಾಗಿದೆ ಎಂದರು.

ವೇದಿಕೆ ಮೇಲೆ ಕೆಕೆಆರ್ಡಿಬಿ ಅಧ್ಯಕ್ಷ ಡಾ ಅಜಯ್ ಸಿಂಗ್, ಶಾಸಕರಾದ ಎಂ ವೈ ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂ ಎಲ್ ಸಿ ಜಗದೇವ ಗುತ್ತೇದಾರ, ಚಂದ್ರಿಕಾ ಪರಮೇಶ್ವರ, ಅರುಣ್ ಕುಮಾರ್ ಎಂ ವೈ ಪಾಟೀಲ, ಪ್ರವೀಣ್ ಹರವಾಳ, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್, ಸಿಇಒ ಭಂವರ್ ಸಿಂಗ್ ಮೀನಾ, ಕಮೀಷನರ್ ಡಾ ಶರಣಪ್ಪ ಢಗೆ, ಮಹಾನಗರ ಪಾಲಿಕೆ ಕಮೀಷನರ್ ಅವಿನಾಶ ಶಿಂಧೆ, ಎಸ್ ಪಿ ಅಡ್ಡೂರು ಶ್ರೀನಿವಾಸಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ, ಕೃಷಿಕಲ್ಪದ ಸಿಇಒ ಸಿಎಂ ಪಾಟೀಲ್ ಸೇರಿದಂತೆ ಹಲವರಿದ್ದರು.

> ಬೆಂಗಳೂರು ಆಚೆಗೂ ಕೂಡಾ ಉದ್ಯಮ ಸ್ಥಾಪನೆಗೆ ಸರ್ಕಾರ ಆದ್ಯತೆ ನೀಡುತ್ತಿದ್ದು ' ಬಿಯಾಂಡ್ ಬೆಂಗಳೂರು ' ಕಾರ್ಯಕ್ರಮದಡಿ ಬೆಂಗಳೂರು ಹೊರತುಪಡಿಸಿ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಹಾಗೂ ನವೋದ್ಯಮ ಸ್ಥಾಪನೆಗೆ ಮುಂದಾಗುವ ಸ್ಟಾರ್ಟ್ ಅಪ್ ಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ ಎಂದ ಸಚಿವರು ಟೈರ್ 2 ಹಾಗೂ 3 ನಗರಗಳ ಬೆಳವಣಿಗೆಗೆ ಹಾಗೂ ಉದ್ಯಮದ ಅಭಿವೃದ್ಧಿಗೆ ಬೇಕಾಗುವ ಎಲ್ಲ ಕ್ರಮವಹಿಸಲು ಮುಂದಾಗಿದೆ.
>
> । ಪ್ರಿಯಾಂಕ್ ಖರ್ಗೆ, ಕಲಬುರಗಿ ಉಸ್ತುವಾರಿ ಸಚಿವ

## ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ । ಎಕ್ಸ್‌ಲೆನ್ಸ್ ವಿಕಾಸ ಪ್ರೇರಣೆ ಉದ್ಘಾಟನೆ

# ಉದ್ಯಮ ಬೆಳವಣಿಗೆಗೆ ಕೃಷಿಕಲ್ಪ ಸೆಂಟರ್

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಕೃಷಿಕಲ್ಪ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಪೂರಕ ಆಗಲಿದೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗೋಲ್ಡ್ ಹಬ್‌ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟಿ ಬಿಟಿ ಇಲಾಖೆ, ಕೆಕೆಆರ್‌ಡಿಬಿ, ಕೃಷಿಕಲ್ಪ ಅಡಿ ಆಯೋಜಿಸಿದ್ದ ಕೃಷಿಕಲ್ಪ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಉದ್ಘಾಟನೆ, ವಿಕಾಸ ಮತ್ತು ಪ್ರೇರಣಾ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿ, ಕರ್ನಾಟಕದಲ್ಲಿ 18,000 ನೂತನ ಸ್ಟಾರ್ಟ್‌ಅಪ್ ನೋಂದಣಿ ಮಾಡಿಕೊಂಡಿದ್ದು, ಸೂಕ್ತ ಮಾರ್ಗದರ್ಶನ, ಪೈಲೆಟ್, ಹೂಡಿಕೆ ಬೇಕು. ಇದಕ್ಕೆ ಅನುದಾನ ಅಗತ್ಯವಿದ್ದು, ಸರ್ಕಾರ 1500 ಸ್ಟಾರ್ಟ್‌ಅಪ್‌ಗಳಿಗೆ ಅನುದಾನ ನೀಡಲು ತಯಾರಿದೆ ಎಂದರು.

ಬಿಯಾಂಡ್ ಬೆಂಗಳೂರು ಅಡಿ ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಬೆಳಗಾವಿ, ಕಲಬುರಗಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ವಾತಾವರಣ ನಿರ್ಮಿಸಲು, ಸ್ಟಾರ್ಟ್‌ಅಪ್‌ಗಳಿಗೆ ಸಹಕಾರ ನೀಡಲಾಗುತ್ತಿದೆ

ನವೋದ್ಯಮದ ಅಭಿವೃದ್ಧಿಯನ್ನು ಪರಿಗಣಿಸಿ ಡೀಪ್ ಟೆಕ್ ಸ್ಟಾರ್ಟ್‌ಅಪ್ ಪ್ರೋತ್ಸಾಹಕ್ಕೆ ಅನುದಾನ ನೀಡಲಾಗುವುದು. ಕೃಷಿ ವಲಯದ ಅಭಿವೃದ್ಧಿಗೆ ಕಲಬುರಗಿಯಲ್ಲಿ ಅಗ್ರಿಕಲ್ಚರ್ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಸ್ಥಾಪನೆಗೆ ಮುಂದಾಗಿದ್ದು, ಕೃಷಿ ವಲಯಕ್ಕೆ ಎಕ್ಸ್‌ಲೆನ್ಸ್ ದೇಶದಲ್ಲೇ ಮೊದಲನೆಯದ್ದು ಎಂದರು.

ಕೆಕೆಆರ್‌ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ ಅಜಯ್ ಸಿಂಗ್ ಮಾತನಾಡಿ, ಸರ್ಕಾರ, ಕೆಕೆಆರ್‌ಡಿಬಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಆದ್ಯತೆ ನೀಡಿದೆ. ಕೃಷಿ ಕಲ್ಪದೊಂದಿಗೆ ಹೊಸ ಕಾರ್ಯಕ್ರಮ ಜಾರಿ ಮಾಡುತ್ತಿದೆ ಎಂದರು.

ಶಾಸಕರಾದ ಎಂ.ವೈ ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂಎಲ್‌ಸಿ ಜಗದೇವ ಗುತ್ತೇದಾರ, ಪ್ರಮುಖರಾದ ಚಂದ್ರಿಕಾ ಪರಮೇಶ್ವರ, ಅರುಣಕುಮಾರ ಎಂ.ವೈ ಪಾಟೀಲ, ಪ್ರವೀಣ ಹರವಾಳ, ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ಸಿಇಒ ಭಂವರ್ ಸಿಂಗ್ ಮೀನಾ, ಡಾ.ಶರಣಪ್ಪ ಎಸ್.ಡಿ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಎಸ್‌ಪಿ ಅಡ್ಡೂರು ಶ್ರೀನಿವಾಸುಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ, ಕೃಷಿಕಲ್ಪದ ಸಿಇಒ ಸಿಎಂ ಪಾಟೀಲ್ ಇತರರಿದ್ದರು.



ಕಲಬುರಗಿಯಲ್ಲಿ ಕೃಷಿ ಕಲ್ಪ ಸೆಂಟರ್ ಆಫ್ ಎಕ್ಸ್‌ಲೆನ್ಸ್‌ನ್ನು ಸಚಿವ ಪ್ರಿಯಾಂಕ್ ಖರ್ಗೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯಸಿಂಗ್ ಉದ್ಘಾಟಿಸಿದರು. ಶಾಸಕರಾದ ಅಲ್ಲಮಪ್ರಭು ಪಾಟೀಲ್, ಜಗದೇವ ಗುತ್ತೇದಾರ್, ಚಂದ್ರಿಕಾ ಪರಮೇಶ್ವರ, ಅರುಣಕುಮಾರ ಎಂ.ವೈ ಪಾಟೀಲ್, ಪ್ರವೀಣ ಹರವಾಳ, ಇಕ್ರಮ್ ಶರೀಫ್ ಇತರರಿದ್ದರು.

> ಐದು, , ಹತ್ತು ವರ್ಷದ ಅಭಿವೃದ್ಧಿ ದೃಷ್ಟಿಯಿಂದ ಕಲ್ಯಾಣ ಕರ್ನಾಟಕ ಭಾಗಕ್ಕೆ ನೀಡಬೇಕಾದ ಅನುದಾನದ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ಗೋವಿಂದರಾವ್ ವರದಿಯಂತೆ ಈ ಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುವುದು. ಕೃಷಿ ಕಲ್ಪಕ್ಕೆ ಕೆಕೆಆರ್‌ಡಿಬಿಯಿಂದ ಸಹಕಾರ ನೀಡಿ, ನವೋದ್ಯಮದ ಬೆಳವಣಿಗೆಗೆ ಶಕ್ತಿ ತುಂಬಲಾಗುವುದು.
>
> । ಡಾ.ಅಜಯಸಿಂಗ್ ಅಧ್ಯಕ್ಷ ಕೆಕೆಆರ್‌ಡಿಬಿ

# ಸಚಿವರಿಂದ ಕೃಷಿ ಕಲ್ಪಕ್ಕೆ ಚಾಲನೆ

## ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಎಂದ ಸಚಿವ ಪ್ರಿಯಾಂಕ್ ಖರ್ಗೆ

■ **ವಿಕ ಸುದ್ದಿಲೋಕ** ಕಲಬುರಗಿ

ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗೋಲ್ಡ್ ಹಬ್‌ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟಿ - ಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ ಕೃಷಿಕಲ್ಪ ಅಡಿಯಲ್ಲಿ ಆಯೋಜಿಸಲಾಗಿದ್ದ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನೆ ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಕರ್ನಾಟಕದಲ್ಲಿ 18,000 ನೂತನ ಸ್ಟಾರ್ಟ್‌ಅಪ್‌ಗಳು ಪ್ರಾರಂಭಗೊಳ್ಳಲು ನೋಂದಣಿ ಮಾಡಿಕೊಂಡಿವೆ. ನವೋದ್ಯಮಕ್ಕೆ ಗೈಡೆನ್ಸ್, ಪೈಲೆಟ್ ಹಾಗೂ ಫಂಡಿಂಗ್ ಬೇಕೇ ಬೇಕು. ಇದಕ್ಕೆ ರೂ 50 ಲಕ್ಷ ರೂ. ಅನುದಾನ ಅಗತ್ಯವಿದೆ. ಸಧ್ಯ ರಾಜ್ಯ ಸರಕಾರ ಒಟ್ಟು 1500 ಸ್ಟಾರ್ಟ್‌ಅಪ್ ಗಳಿಗೆ ಈ ಅನುದಾನ ನೀಡಲು ತಯಾರಾಗಿದೆ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿನ ನವೋದ್ಯಮದ ಅಭಿವೃದ್ಧಿಯನ್ನು ಪರಿಗಣಿಸಿ ಡೀಪ್ ಟೆಕ್ ಸ್ಟಾರ್ಟ್‌ಅಪ್ ಪ್ರೋತ್ಸಾಹಕ್ಕಾಗಿ ಅನುದಾನ ನೀಡಲು ತಯಾರಿದ್ದು ಮೈಸೂರಿನಲ್ಲಿ 402, ಮಂಗಳೂರಿನಲ್ಲಿ 332, ಹುಬ್ಬಳ್ಳಿ- ಧಾರವಾಡ ಭಾಗದಲ್ಲಿ 463 ಹಾಗೂ ಕ-ಕ ಭಾಗದಲ್ಲಿ 282 ಸ್ಟಾರ್ಟ್ ಅಪ್ ಗಳಿದ್ದು, ಇವುಗಳಿಗೆ ರೂ 1,000 ಕೋಟಿ ಅನುದಾನ ನೀಡಿ ಸರಕಾರ ಪ್ರೋತ್ಸಾಹ ನೀಡುತ್ತಿದೆ ಎಂದರು.



ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು.

> ಬೆಂಗಳೂರು ಆಚೆಗೂ ಕೂಡಾ ಉದ್ಯಮ ಸ್ಥಾಪನೆಗೆ ಸರಕಾರ ಆದ್ಯತೆ ನೀಡುತ್ತಿದ್ದು' ಬಿಯಾಂಡ್ ಬೆಂಗಳೂರು ' ಕಾರ್ಯಕ್ರಮದಡಿ ಬೆಂಗಳೂರು ಹೊರತುಪಡಿಸಿ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಹಾಗೂ ನವೋದ್ಯಮ ಸ್ಥಾಪನೆಗೆ ಮುಂದಾಗುವ ಸ್ಟಾರ್ಟ್ ಅಪ್‌ಗಳಿಗೆ ಎಲ್ಲ ರೀತಿಯ ಸಹಕಾರ ನೀಡುತ್ತಿದೆ.
>
> **- ಪ್ರಿಯಾಂಕ್ ಖರ್ಗೆ,** ಜಿಲ್ಲಾ ಉಸ್ತುವಾರಿ ಸಚಿವ

ಕೃಷಿ ವಲಯದ ಅಭಿವೃದ್ಧಿ ಹಾಗೂ ಸಮಗ್ರ ಬೆಳವಣಿಗೆಗೆ ಸ'ಹ'ಕಾರಿಯಾಗ'ಂವ್'ಂತ್' ಕಲಬುರಗಿಯಲ್ಲಿ ಅಗ್ರಿಕಲ್ಚರ್ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಗೆ ಸರಕಾರ ಮುಂದಾಗಿದ್ದು ಕೃಷಿ ವಲಯಕ್ಕಾಗಿ ಇಂತಹ ಒಂದು ಎಕ್ಸಲೆನ್ಸ್ ಸ್ಥಾಪನೆ ಮಾಡಲು ಮುಂದಾಗಿದ್ದು ದೇಶದಲ್ಲೇ ಮೊದಲನೆಯದಾಗಲಿದೆ. ಇದು ಕೃಷಿ ವಲಯದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಮಾತನಾಡಿ, ಸರಕಾರ, ಕೆಕೆಆರ್‌ಡಿಬಿಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತವಾರಣ ನಿರ್ಮಾಣಕ್ಕೆ ಮುಂದಾಗಿದ್ದು ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪ ದೊಂದಿಗೆ ಒಗ್ಗೂಡಿ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಕಾರ್ಯಕ್ರಮ ರೂಪಿಸಿದೆ ಇವುಗಳ ಅಡಿಯಲ್ಲಿ ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದರು.

'ಕೃಷಿಕಲ್ಪ ಸಿಒಇ', 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮ | ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ

# ಕ.ಕ. ಭಾಗದ ಉದ್ಯಮ ಬೆಳವಣಿಗೆಗೆ 'ಕೃಷಿಕಲ್ಪ ಸಿಒಇ' ಪೂರಕ

**ವಿಶ್ವವಾಣಿ ಸುದ್ದಿಮನೆ** ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮಶೀಲತೆ ಹಾಗೂ ನವೋದ್ಯಮಗಳ ಬೆಳವಣಿಗೆಗೆ 'ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್' (ಸಿಒಇ) ಅತ್ಯಂತ ಪೂರಕ ವೇದಿಕೆಯಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದ ಗೋಲ್ಡ್ ಹಬ್‌ನಲ್ಲಿ ಗ್ರಾಮೀಣಾಭಿವೃದ್ಧಿ, ಐಟಿ-ಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ 'ಕೃಷಿಕಲ್ಪ' ಸಂಸ್ಥೆಯ ಜಂಟಿ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಕೃಷಿಕಲ್ಪ ಸಿಒಇ' ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿ, ರಾಜ್ಯದಲ್ಲಿ ಸದ್ಯ 18,000 ಸ್ಟಾರ್ಟ್‌ಅಪ್‌ಗಳು ನೋಂದಾಯಿಸಿಕೊಂಡಿದ್ದು, ಇವುಗಳಿಗೆ ಆರಂಭಿಕ ಮಾರ್ಗದರ್ಶನ ಹಾಗೂ ಫಂಡಿಂಗ್ ಅತ್ಯಗತ್ಯವಾಗಿದೆ. ಇದಕ್ಕಾಗಿ ತಲಾ 50 ಲಕ್ಷದಂತೆ ಒಟ್ಟು 1,500 ನವೋದ್ಯಮಗಳಿಗೆ ಅನುದಾನ ನೀಡಲು ಸರಕಾರ ಸಿದ್ಧವಿದೆ ಎಂದು ಹೇಳಿದರು.



'ಕೃಷಿಕಲ್ಪ ಸಿಒಇ' ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು. ಈ ವೇಳೆ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಶಾಸಕ ಎಂ.ವೈ.ಪಾಟೀಲ್, ಅಲ್ಲಮಪ್ರಭು ಪಾಟೀಲ್, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ್ ಸೇರಿ ಅನೇಕರಿದ್ದರು.

ಬಿಯಾಂಡ್ ಬೆಂಗಳೂರು ಯೋಜನೆಯಡಿ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಕೈಗಾರಿಕಾ ಪೂರಕ ವಾತಾವರಣ ನಿರ್ಮಿಸಲಾಗುತ್ತಿದೆ. ಡೀಪ್‌ಟೆಕ್ ಸ್ಟಾರ್ಟ್‌ಅಪ್‌ಗಳ ಪ್ರೋತ್ಸಾಹಕ್ಕಾಗಿ ಮೈಸೂರು, ಮಂಗಳೂರು, ಹುಬ್ಬಳ್ಳಿ ಹಾಗೂ ಕಲ್ಯಾಣ ಕರ್ನಾಟಕದ 282 ಸ್ಟಾರ್ಟ್‌ಅಪ್‌ಗಳು ಸೇರಿದಂತೆ ಒಟ್ಟು 1,000 ಕೋಟಿ ಅನುದಾನವನ್ನು ಒದಗಿಸಲಾಗುತ್ತಿದ್ದು, ಇದು ಟೈರ್-2 ಮತ್ತು ಟೈರ್-3 ನಗರಗಳ ಯುವ ಉದ್ಯಮಿಗಳಿಗೆ ವರವಾಗಲಿದೆ ಎಂದರು.

ಇದೇ ವೇಳೆ, ಐಐಐಟಿ ರಾಯಚೂರಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಹಾಗೂ ಉದ್ಯಮ ಸ್ಥಾಪನೆಗೆ ಕೆಕೆಆರ್‌ಡಿಬಿಯಿಂದ ಅಗತ್ಯ ಅನುದಾನ ಒದಗಿಸುವಂತೆ ಮಂಡಳಿಯ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರಿಗೆ ಮನವಿ ಮಾಡಿದರು.

## ಕೆಕೆಆರ್‌ಡಿಬಿ ಬೆನ್ನೆಲುಬು: ಡಾ.ಅಜಯ್ ಸಿಂಗ್

**ಕಾರ್ಯಕ್ರಮದಲ್ಲಿ ಮಾತನಾಡಿದ ಕೆಕೆಆರ್‌ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ.ಅಜಯ್ ಸಿಂಗ್, ಕಲ್ಯಾಣ ಕರ್ನಾಟಕ ಭಾಗದ ಯುವ ಉದ್ಯಮಿಗಳನ್ನು ಉತ್ತೇಜಿಸಲು 'ಕೃಷಿಕಲ್ಪ' ಜತೆಗೂಡಿ ವಿಕಾಸ ಮತ್ತು ಪ್ರೇರಣಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಗೋವಿಂದ್ ರಾವ್ ವರದಿಯ ಶಿಫಾರಸಿನಂತೆ ಈ ಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಿ, ಕೃಷಿಕಲ್ಪ ಸಂಸ್ಥೆಯ ಬೆಳವಣಿಗೆಗೆ ಕೆಕೆಆರ್‌ಡಿಬಿ ಸದಾ ಬೆನ್ನೆಲುಬಾಗಿ ನಿಲ್ಲಲಿದೆ ಎಂದು ಭರವಸೆ ನೀಡಿದರು.**

**ಜಾಗತಿಕ ಮಟ್ಟದಲ್ಲಿ ಕಲಬುರಗಿ ರೊಟ್ಟಿ ಬ್ರ್ಯಾಂಡ್:** ಕಲಬುರಗಿಯ ಪ್ರಸಿದ್ಧ 'ರೊಟ್ಟಿ ಬ್ರ್ಯಾಂಡ್' ಈಗ ಜಾಗತಿಕ ಮಟ್ಟ ತಲುಪಿದ್ದು, ಕೆನಡಾ, ಅಮೆರಿಕಕ್ಕೂ ರಫ್ತಾಗುತ್ತಿದೆ. ಪುಣೆ ಮೂಲದ ಕಂಪನಿಯೊಂದಿಗೆ 3 ವರ್ಷಗಳ ಒಪ್ಪಂದವಾಗಿದ್ದು, ಮಹಿಳಾ ಸಂಘಗಳು ಸಿದ್ಧಪಡಿಸುವ ವರ್ಷಕ್ಕೆ 1 ಲಕ್ಷ ರೊಟ್ಟಿಗಳನ್ನು ಪೂರೈಸಲಾಗುತ್ತಿದೆ. ಈ ಮೂಲಕ ಮಹಿಳಾ ಸಬಲೀಕರಣಕ್ಕೆ ವೇದಿಕೆ ಕಲ್ಪಿಸಲಾಗಿದೆ ಎಂದು ಖರ್ಗೆ ಹೆಮ್ಮೆಯಿಂದ ಹಂಚಿಕೊಂಡರು. ಜತೆಗೆ, ಕೃಷಿ ವಲಯದ ಸಮಗ್ರ ಅಭಿವೃದ್ಧಿಗಾಗಿ ದೇಶದಲ್ಲೇ ಮೊದಲ ಬಾರಿಗೆ ಕಲಬುರಗಿಯಲ್ಲಿ 'ಅಗ್ರಿಕಲ್ಚರ್ ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪಿಸಲು ಸರಕಾರ ಮುಂದಾಗಿದೆ ಎಂದರು.

ಕಾರ್ಯಕ್ರಮದ ವೇದಿಕೆಯಲ್ಲಿ ಶಾಸಕ ಎಂ.ವೈ.ಪಾಟೀಲ್, ಅಲ್ಲಮಪ್ರಭು ಪಾಟೀಲ್, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ್, ಪ್ರಮುಖರಾದ ಚಂದ್ರಿಕಾ ಪರಮೇಶ್ವರ, ಅರುಣ್ ಕುಮಾರ್ ಎಂ.ವೈ.ಪಾಟೀಲ್, ಪ್ರವೀಣ್ ಹರವಾಳ, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್, ಜಿ.ಪಂ. ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಹಾಗೂ ಕೃಷಿಕಲ್ಪ ಸಂಸ್ಥೆಯ ಸಿಇಒ ಸಿ.ಎಂ.ಪಾಟೀಲ್ ಉಪಸ್ಥಿತರಿದ್ದರು.

# ‘ಕಲ್ಯಾಣದ ಉದ್ಯಮ ಬೆಳವಣಿಗೆಗೆ ಕೃಷಿಕಲ್ಪ ಪೂರಕ’

■ **ಉದಯವಾಣಿ ಸಮಾಚಾರ**

**ಕಲಬುರಗಿ:** ಕೃಷಿಕಲ್ಪ ಸೆಂಟರ್‌ಆಫ್ ಎಕ್ಸಲೆನ್ಸ್ (COE) ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗೋಲ್ಡ್ ಹಬ್‌ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟಿ – ಬಿಟಿ ಇಲಾಖೆ, ಕೆಕೆಆರ್‌ಡಿಬಿ ಹಾಗೂ ಕೃಷಿಕಲ್ಪ ಅಡಿಯಲ್ಲಿ ಆಯೋಜಿಸಿದ್ದ ಕೃಷಿಕಲ್ಪ ಸೆಂಟರ್‌ಆಫ್ ಎಕ್ಸಲೆನ್ಸ್ (COE) ಉದ್ಘಾಟನೆ ಹಾಗೂ ‘ವಿಕಾಸ ಮತ್ತು ಪ್ರೇರಣಾ’ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ 18,000 ನೂತನ ಸ್ಟಾರ್ಟ್‌ಅಪ್‌ಗಳು ಪ್ರಾರಂಭಗೊಳ್ಳಲು ನೋಂದಣಿ ಮಾಡಿವೆ. ನವೋದ್ಯಮಕ್ಕೆ ಗೈಡೆನ್ಸ್, ಪೈಲೆಟ್ ಹಾಗೂ ಫಂಡಿಂಗ್ ಬೇಕೇ ಬೇಕು. ಇದಕ್ಕೆ 50 ಲಕ್ಷ ರೂ. ಅನುದಾನ ಅಗತ್ಯವಿದೆ. ಸದ್ಯ ರಾಜ್ಯ ಸರ್ಕಾರ ಒಟ್ಟು 1500 ಸ್ಟಾರ್ಟ್ ಅಪ್‌ಗಳಿಗೆ ಈ ಅನುದಾನ ನೀಡಲು ತಯಾರಾಗಿದೆ ಎಂದು ತಿಳಿಸಿದರು.

ಬೆಂಗಳೂರು ಆಚೆಗೂ ಉದ್ಯಮ ಸ್ಥಾಪನೆಗೆ ಸರ್ಕಾರ ಆದ್ಯತೆ ನೀಡುತ್ತಿದ್ದು ‘ಬಿಯಾಂಡ್ ಬೆಂಗಳೂರು’ ಕಾರ್ಯಕ್ರಮದಡಿ ಬೆಂಗಳೂರು ಹೊರತುಪಡಿಸಿ ಮೈಸೂರು, ಮಂಗಳೂರು, ಹುಬ್ಬಳ್ಳಿ- ಧಾರವಾಡ, ಬೆಳಗಾವಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಿಸಲು ಹಾಗೂ ನವೋದ್ಯಮ ಸ್ಥಾಪನೆಗೆ ಮುಂದಾಗುವ ಸ್ಟಾರ್ಟ್ ಅಪ್‌ಗಳಿಗೆ ಎಲ್ಲ ಸಹಕಾರ ನೀಡುತ್ತಿದೆ. ಟೈರ್ 2 ಹಾಗೂ 3 ನಗರಗಳ ಬೆಳವಣಿಗೆಗೆ ಹಾಗೂ ಉದ್ಯಮದ ಅಭಿವೃದ್ಧಿಗೆ ಬೇಕಾಗುವ ಎಲ್ಲ ಕ್ರಮವಹಿಸಲು ಮುಂದಾಗಿದೆ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿನ ನವೋದ್ಯಮದ ಅಭಿವೃದ್ಧಿ ಪರಿಗಣಿಸಿ ಡೀಪ್ ಟೆಕ್ ಸ್ಟಾರ್ಟ್‌ಅಪ್ ಪ್ರೋತ್ಸಾಹಕ್ಕಾಗಿ ಅನುದಾನ ನೀಡಲು ತಯಾರಿದ್ದು, ಮೈಸೂರಿನಲ್ಲಿ 402, ಮಂಗಳೂರಿನಲ್ಲಿ 332, ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ 463 ಹಾಗೂ ಕ.ಕ ಭಾಗದಲ್ಲಿ 282 ಸ್ಟಾರ್ಟ್ ಅಪ್‌ಗಳಿದ್ದು, ಇವುಗಳಿಗೆ ಸಾವಿರ ಕೋಟಿ ರೂ. ಅನುದಾನ ನೀಡಿ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಇದರಿಂದ ಟೈರ್ 2 ಹಾಗೂ 3 ನಗರಗಳಲ್ಲಿ ಯುವ ಉದ್ಯಮಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಐಐಐಟಿ ರಾಯಚೂರುಗೆ ಹೋಗಿದ್ದು ಅಲ್ಲಿಗೆ ಅನುಕೂಲವಾಗುವಂತ ಉದ್ಯಮ ಸ್ಥಾಪನೆಗೆ ಬೇಕಾಗುವ ಮಾನವ ಸಂಪನ್ಮೂಲ ಸೃಜಿಸಿ ಅವುಗಳನ್ನು ಒದಗಿಸಲು ಕೆಕೆಆರ್‌ಡಿಬಿಯಿಂದ ಅನುದಾನ ಒದಗಿಸುವಂತೆ ಸಚಿವರು ಡಾ। ಅಜಯಸಿಂಗ್ ಅವರಿಗೆ ಮನವಿ ಮಾಡಿದರು.

**ಚಿತ್ತಾಪುರದ ನಿಮ್ಜ್ ಕುಂಠಿತ:** ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಸುಮಾರು 22 ಸಾವಿರ ಎಕರೆ ಪ್ರದೇಶದಲ್ಲಿ ನ್ಯಾಷನಲ್ ಇನ್‌ವೆಸ್ಟ್‌ಮೆಂಟ್ ಮ್ಯಾನುಫ್ಯಾಕ್ಚರಿಂಗ್ ಜೋನ್ (NIMZ–ರಾಷ್ಟ್ರೀಯ ಹೂಡಿಕೆ ಉತ್ಪಾದನಾ ವಲಯ) ನಿರ್ಮಾಣಕ್ಕೆ ಈ ಹಿಂದೆ ಕ್ರಮವಹಿಸಲಾಗಿತ್ತು. ಆದರೆ ಆ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ್ದರಿಂದ ಅದು ಅಲ್ಲಿಗೆ ನಿಂತುಹೋಯಿತು. ಇಲ್ಲದಿದ್ದರೆ ಈ ಭಾಗದ ಉದ್ಯಮ ಬೆಳವಣಿಗೆ ಸಹಕಾರಿಯಾಗುತ್ತಿತ್ತು ಎಂದರು.

ಕೆಕೆಆರ್‌ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ। ಅಜಯಸಿಂಗ್ ಮಾತನಾಡಿ, ಸರ್ಕಾರ, ಕೆಕೆಆರ್‌ಡಿಬಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತವಾರಣ ನಿರ್ಮಾಣಕ್ಕೆ ಮುಂದಾಗಿದೆ. ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪದೊಂದಿಗೆ ಒಗ್ಗೂಡಿ ಕೃಷಿಕಲ್ಪ ಸೆಂಟರ್‌ಆಫ್ ಎಕ್ಸಲೆನ್ಸ್ (COE) ಕಾರ್ಯಕ್ರಮ ರೂಪಿಸಿದೆ. ಇವುಗಳ ಅಡಿಯಲ್ಲಿ ವಿಕಾಸ ಮತ್ತು ಪ್ರೇರಣಾ ಕಾರ್ಯಕ್ರಮ ಜಾರಿಗೊಳಿಸುತ್ತಿದೆ ಎಂದರು.

ಮುಂಬರುವ ಐದು ಅಥವಾ ಹತ್ತು ವರ್ಷದಲ್ಲಿ ಈ ಭಾಗಕ್ಕೆ ನೀಡಬೇಕಾದ ಅನುದಾನದ ಬಗ್ಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ. ಗೋವಿಂದರಾವ್ ವರದಿಯಂತೆ ಕಲ್ಯಾಣ ಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುವುದು. ಕೃಷಿಕಲ್ಪಕ್ಕೆ ಕೆಕೆಆರ್‌ಡಿಬಿ ಬೆನ್ನೆಲುಬಾಗಿ ನಿಂತು ಈ ಭಾಗದಲ್ಲಿ ಉದ್ಯಮ ಅಭಿವೃದ್ಧಿಪಡಿಸುವುದಾಗಿ ತಿಳಿಸಿದರು.

ಈ ವೇಳೆ ಶಾಸಕರಾದ ಎಂ.ವೈ. ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂಎಲ್ಸಿ ಜಗದೇವ ಗುತ್ತೇದಾರ, ಚಂದ್ರಿಕಾ ಪರಮೇಶ್ವರ, ಅರುಣಕುಮಾರ್ ಎಂವೈ. ಪಾಟೀಲ, ಪ್ರವೀಣ್ ಹರವಾಳ, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಶರೀಫ್, ಸಿಇಒ ಭಂವರ್ ಸಿಂಗ್ ಮೀನಾ, ಕಮಿಷನರ್ ಡಾ। ಶರಣಪ್ಪ ಢಗೆ, ಮಹಾನಗರ ಪಾಲಿಕೆ ಕಮಿಷನರ್ ಅವಿನಾಶ ಶಿಂಧೆ, ಎಸ್ಪಿ ಅಡ್ಡೂರು ಶ್ರೀನಿವಾಸಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ, ಕೃಷಿಕಲ್ಪದ ಸಿಇಒ ಸಿಎಂ ಪಾಟೀಲ್ ಸೇರಿದಂತೆ ಇತರರಿದ್ದರು.



ಕಲಬುರಗಿ: ನಗರದ ಗೋಲ್ಡ್ ಹಬ್‌ನಲ್ಲಿ ನಡೆದ ಕೃಷಿಕಲ್ಪ ಉದ್ಘಾಟನೆ ಹಾಗೂ ವಿಕಾಸ ಮತ್ತು ಪ್ರೇರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು.